Licence No. 60.
Licenced to Post without Prepayment.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೧ | ಕಾರೀಕು ೨೭–೬–೧೯೫೨ನೇ ಶುಕ್ರವಾರ | ಸಂಚಿಕೆ ೪

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು.

ಲೇ:—ಶ್ರೀ ವಿ. ಎಸ್. ರಾಮಕೃಷ್ಣ ಬಿ. ಎಸ್ಸಿ (ಆನರ್ಸ್) ಬಿ. ಟಿ.

ಭರತಖಂಡವು ಬ್ರಿಟಿಷರ ಸಾಮ್ರಾಜ್ಯ ಶೃಂಖಲೆಯಿಂದ ಕಟ್ಟಲ್ಪಟ್ಟು ಡಾಸ್ಯ ವಿಮೋಚನೆಗೊಳ್ಳಲು ಬಹು ಕಾಲ ಹೆಣಗಿತು. ಸನಾತನವಾದ ಧರ್ಮವನ್ನು ಸಾರಿ ಜಗತ್ತಿಗೆ ಆಧ್ಯಾತ್ಮಿಕ ತತ್ವದ ಮಹಾ ಸಂಧೆಯನ್ನು ಉಣಿಸಿದ ಭಾರತವು ಕಾಲಗತಿಯಿಂದ ಅನ್ಯಾಕ್ರಾಂತವಾಗಿ ಎರಡು ದೀರ್ಘ ಶತಮಾನಗಳ ಕಾಲ ಬಳಲಿತು. ಬ್ರಿಟಿಷರ ಆಕ್ರಮಣಕ್ಕೆ ಒಳಗಾಗಿದ್ದಾಗಲೂ ಭಾರತೀಯರು ತಮ್ಮ ಧೈರ್ಯ-ಸಾಹಸ ಸತ್ಯ ಪರಾಕ್ರಮಗಳಿಂದ ಜಗತ್ತನ್ನು ಬೆರಗುಗೊಳಿಸಿ ಆಂಗ್ಲರ ಪ್ರಬಲ ಶಾಸನವನ್ನೆದುರು ಶಸ್ತ್ರಹೀನರಾಗಿ ಕಾದಾಡಿ ವಿಜಯವನ್ನು ಗಳಿಸಿದರು. ಅನ್ಯರಿಂದ ತಮ್ಮ ನಾಡು ಆಳಲ್ಪಡುವುದನ್ನು ಸ್ವಲ್ಪವೂ ಸಹಿಸದ ಭಾರತೀಯರು ತಮ್ಮ ಪ್ರಾಚೀನ ನಾಗರಿಕತೆಗೆ ಅನ್ವಯಿಸಿ ಅಹಿಂಸಾತ್ಮಕ ಸಮರ ಹೂಡಿ ಆಂಗ್ಲ ಶಾಸನವನ್ನು ಮುರಿದು ಸ್ವತಂತ್ರ ಪ್ರಭುತ್ವವನ್ನು ಕಟ್ಟಿದರು. ಮಹಾತ್ಮಾ ಗಾಂಧೀಜಿಯವರ ಮಹಾ ನಾಯಕತ್ವದಲ್ಲಿ ನಡೆದ ಅಹಿಂಸಾತ್ಮಕ ಆಂದೋಲನದಲ್ಲಿ ಅಗಣಿತ ಸಂಖ್ಯೆಯ ಯೋಧರು ಭಾಗವಹಿಸಿ ಪ್ರಬಲ ಶಸ್ತ್ರವಾದ ಬ್ರಿಟಿಷ್ ಸರಕಾರ ಬೊಡನೆ ಹೆಣಗಿದರು. ತಮ್ಮನ್ನು ತಾವೇ ವರಿತು ತಮ್ಮ ಪ್ರಾಚೀನ ಸತ್ವ ಪರಾಕ್ರಮಗಳನ್ನು ಕೆಲ ಕಾಲ ಮಾತ್ರ ಬಚ್ಚಿಟ್ಟಿದ್ದ ಭಾರತೀಯರ ನಿಜಸ್ವರೂಪವು ಮಹಾತ್ಮನ ಅಮರವಾಣಿಯಿಂದ ಸ್ವಯಂ ಪ್ರಕಾಶಗೊಂಡು ಬೆಳಗತೊಡಗಿ ಭಾರತ ಮಾತೆಯ ಬಂಧವಿಮೋಚನೆಗೈಯಲು ಭಾರತೀಯರು ಬದ್ಧ ಕಂಕಣರಾದರು.

ಪಂಡಿತ ಜವಾಹರಲಾಲ್ ನೆಹರೂ ಸರ್ದಾರ್ ವಲ್ಲಭಭಾಯಿ ಪಟೆಲ್, ಸರೋಜಿನಿ ದೇವಿ ಮುಂತಾದ ಪ್ರತಿಭಾಪೂರ್ಣ ವ್ಯಕ್ತಿಗಳಿಂದ ಗಾಂಧೀಜಿಯ ಸತ್ಯಾಗ್ರಹ ಸಮರವು ಅವಿಶ್ರಾಂತವಾಗಿ ನಡೆದು ಅನೇಕ ಘಟ್ಟಗಳನ್ನು ದಾಟಿ ಕಷ್ಟ ಪಿಷ್ಟರಗಳ ತ್ಯಾಗಕಾರ್ಪಣ್ಯಗಳ ಸಂಕ್ರಮಣ ಸಂಧಿ ಕಾಲಗಳನ್ನು ಕ್ರಮಿಸಿ ಭಾರತ ಸ್ವಾತಂತ್ರ್ಯ ಸೂರ್ಯನು ನಭೋತಲದಲ್ಲಿ ಉದಯಿಸಿದನು. ಗಾಂಧೀಜಿಯವರ ಸತ್ಯಾಗ್ರಹ ಸಮರದ ಯೋಧ ಪಡೆಗೆ ಸೇರಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತಮ್ಮ ತನು ಮನ ಧನಗಳನ್ನು ಅರ್ಪಣೆಗೈದು ಭಾರತ ಸ್ವಾತಂತ್ರ್ಯಕ್ಕೆ ಕಾರಣಭೂತರಾದ ತ್ಯಾಗಮೂರ್ತಿ ಸತ್ಯ ಶೀಲ ವ್ಯಕ್ತಿಗಳಲ್ಲಿ ಬಾಬು ರಾಜೇಂದ್ರ ಪ್ರಸಾದರೂ ಅಗ್ರಗಣ್ಯರು.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರನ್ನು ಅರಿಯದ ಭಾರತೀಯರಾರು? ಅಂದು ಕಾಂಗ್ರೆಸಿನ ಅಧ್ಯಕ್ಷ ಪೀಠವನ್ನು ಅಲಂಕರಿಸಿ ರಾಷ್ಟ್ರಪತಿಗಳಾಗಿದ್ದರೆ ಇಂದು ಭಾರತ ಸರಕಾರದಲ್ಲಿ ಪ್ರಥಮ ಅಧಿಕಾರ ಸ್ಥಾನ ವಹಿಸಿ ರಾಷ್ಟ್ರಪತಿಗಳಾಗಿದ್ದಾರೆ. ಪ್ರಸಾದರದು ಸರಳ ಸ್ವಭಾವ ಆಡಂಬರವಿಲ್ಲದ ಪವಿತ್ರ ಜೀವನ, ಮೃದು ಹೃದಯ, ಕಾರ್ಯದಕ್ಷತೆ, ಸ್ವತಃ ಆಚರಣೆಯಲ್ಲಿ ಗಾಂಧೀ ವಾದವನ್ನು ಬಳಸಿ ದಿನ ನಿತ್ಯದ ಜೀವನದಲ್ಲಿ ಸತ್ಯ ಮಾರ್ಗವನ್ನು ಅನುಸ್ಪಿಸುವ ವಿಶೇಷ ಗುಣ ಇವುಗಳೆಲ್ಲವೂ ಒಂದಾಗಿ ಬಾಬು ರಾಜೇಂದ್ರ ಪ್ರಸಾದರಲ್ಲಿ ಕೇಂದ್ರೀಕರಣಗೊಂಡು ಅವರ ವ್ಯಕ್ತಿತ್ವಕ್ಕೆ ವಿಶೇಷ ಮೆರುಗನ್ನು ಕೊಟ್ಟಿದೆ. ನ್ಯಾಯಶಾಸ್ತ್ರ, ರಾಜನೀತಿಶಾಸ್ತ್ರಗಳಲ್ಲಿ ಪ್ರಸಾದರ ಜ್ಞಾನ ಅಸಾಧಾರಣವಾದುದು. ಒಂದು ವೇಳೆ ಅವರು ಮಹಾತ್ಮರ ಕರೆಗೆ ಕಿವಿಗೊಡದೆ ಬ್ರಿಟಿಷ್ ಸರಕಾರದಲ್ಲಿ ನೌಕರಿಗೆ ಅಸೆಪಟ್ಟಿದ್ದಲ್ಲಿ ಅವರು ಅತ್ಯುಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿಯೋ ಅಥವಾ ಒಂದು ಪ್ರಾಂತದ ರಾಜಪಾಲರಾಗಿಯೋ (ಗವರ್ನರ್) ನಿಯುಕ್ತರಾಗುತಿದ್ದರು. ಆದರೆ ನಾಡಿನ ಕರೆ ಬಂದಾಗ ತಮಗಿದ್ದ ಅಧಿಕ ಸಂಪಾದನೆಯ ವಕೀಲಿ ವೃತ್ತಿಗೆ ತಿಲಾಂಜಲಿಯಿತ್ತು ಮಹಾತ್ಮರ ಅಹಿಂಸಾ ಸಮರದ ಯೋಧರಾಗಿ ಸೇರಿದುದರಿಂದ ಸುಖವು ಯಶವೂ ಭೋಗಪೂರ್ಣವೂ ಆದ ಜೀವನ ಪಥವು ಪ್ರಸಾದರ ಪಾಲಿಗೆ ಕನಸಾಗಿ ಉಳಿದು ಅವರ ಬಾಳು ಕಷ್ಟ ಕಾರ್ಪಣ್ಯ ತ್ಯಾಗ ಸಹನೆಗಳ ಕಠಿಣ ಮಾರ್ಗದಲ್ಲಿ ಮುನ್ನಡೆಯಿತು. ಈ ರೀತಿಯಾದ ತ್ಯಾಗಮಯ ಜೀವನದಿಂದ ಸತ್ಯಾಗ್ರಹ ಸಮರದಲ್ಲಿ ತನ್ನನ್ನು ತಾನು ದಂಡಿಸಿಕೊಂಡುದರ ವಿಶೇಷ ಬಲದಿಂದ ತನ್ನತುಳ ಸತ್ಯ ನಿಷ್ಠೆ ತ್ಯಾಗ ಸೌಜನ್ಯಗಳಿಂದ ಬಾಬೂ ರಾಜೇಂದ್ರ ಪ್ರಸಾದರು ಭರತ ವರ್ಷ ಸರಕಾರದ ಮಹಾ ರಾಷ್ಟ್ರಪತಿಗಳಾಗಿ ಎರಡನೆಯ ಸಲ ಚುನಾಯಿತರಾದರು. ಅಂದು ಬ್ರಿಟಿಷರ ಅಳ್ವಿಕೆಯ ಕಾಲದಲ್ಲಿ ತನಗೆ ಬೇಡವೆಂದು ಪರಿತ್ಯಜಿಸಿದ ಅಧಿಕಾರ ಪೀಠವು ಸ್ವತಂತ್ರ ಭಾರತದಲ್ಲಿ ಪ್ರಸಾದರಿಗೆ ತಾನಾಗಿಯೇ ಲಭಿಸಿತು. ಭಾರತದ ಸನ್ಮಾನ್ಯ ಪುತ್ರನಿಗೆ ಭಾರತೀಯರು ಕೊಟ್ಟ ಕಿರೀಟರಹಿತ ರಾಜತ್ವವು ಪ್ರಸಾದರ ಮೇಲ್ಮೆಯನ್ನೂ ಭಾರತೀಯನ ಸದ್ಬುದ್ಧಿಯನ್ನು ಪ್ರತಿಪಾದಿಸುವುದೆನ್ನುವುದರಲ್ಲಿ ಸಂದೇಹವಿಲ್ಲ.

ಡಾ. ರಾಜೇಂದ್ರ ಪ್ರಸಾದರು ಬಿಹಾರ ಪ್ರಾಂತ್ಯದ ಗೌರವಯುತವಾದ ಕಾಯಸ್ಥ ಕುಟುಂಬವೊಂದರಲ್ಲಿ ಕ್ರಿ. ಶ. ೧೮೮೪ರಲ್ಲಿ ಜನಿಸಿದರು. ವಿದ್ಯಾರ್ಥಿ ದಶೆಯಲ್ಲಿದ್ದಾಗ ಅವರು ಅಪ್ರತಿಮ ಪ್ರತಿಭಾನ್ವಿತರಾದುದರಿಂದ ಇತರ ಪ್ರಥಮ ಪಂಕ್ತಿಯ ವಿದ್ಯಾರ್ಥಿಗಳು ಫಿರಾಶೆಗೊಳ್ಳುವಂತಾಯಿತು. ಕಲ್ಕತ್ತ ನಗರದಲ್ಲಿ ವ್ಯಾಸಂಗ ಮಾಡುತಿದ್ದ ಪ್ರಸಾದರು ಶೀಘ್ರದಲ್ಲಿಯೇ ಜನಪ್ರಿಯರೂ ಖ್ಯಾತಿವಂತರೂ ಆಗಿ ವಿದ್ಯಾರ್ಥಿಗಳ ನಾಯಕರಾಗಿ ಆರಿಸಲ್ಪಟ್ಟರು. ಪ್ರೌಢ ಪರೀಕ್ಷೆಯಲ್ಲೂ ವಿಶ್ವವಿದ್ಯಾನಿಲಯದ ಪ್ರವೇಶ ಹಾಗೂ ಪದವೀ ಪರೀಕ್ಷೆಗಳಲ್ಲೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಪದವೀಧರರಾದರು. ತರುವಾಯ ನ್ಯಾಯ ಶಾಸ್ತ್ರದಲ್ಲಿ ಉನ್ನತವಾದ ಪದವಿಯನ್ನು ಗಳಿಸಿ ನ್ಯಾಯಸ್ಥಾನದಲ್ಲಿ ನ್ಯಾಯಶಾಸ್ತ್ರದ ಪ್ರತಿಪಾದಕರಾಗಿ ಪ್ರಚಂಡ ಕೀರ್ತಿಯನ್ನು ಗಳಿಸಿದರು.

ರಾಜೇಂದ್ರ ಪ್ರಸಾದರು ವಿಶೇಷ ಸಾಹಿತ್ಯಾರ್ಥ್ಯಗಳನ್ನು ಗಳಿಸಿ ನ್ಯಾಯಶಾಸ್ತ್ರ ಪ್ರತಿಪಾದಕರಾಗಿ ಹಣ ಮತ್ತು ಕೀರ್ತಿಯನ್ನು ಸಂಪಾದಿಸುತಿದ್ದ ಕಾಲದಲ್ಲಿ ಭರತಮಾತೆ ಪರಕೀಯ ಆಕ್ರಮಣವನ್ನು ಸಹಿಸಲಾರದೆ ನಿರಗ್ಗಳವಾಗಿ ರೋದಿಸಿದಳು. ಮಾತೆಯ ರೋದನವನ್ನು ಕೇಳಿದ ಭಾರತೀಯರೂ ಭಾರತ ಸ್ವಾತಂತ್ರ್ಯವನ್ನು ಆಪಹರಿಸಿದ ಅನ್ಯದೇಶೀಯರೊಡನೆ ಪ್ರಚಂಡವಾದ ಅಹಿಂಸಾ ಸಮರವನ್ನು ಹೂಡಿದರು. ಭಾರತದ ರಾಜಕೀಯ ಆಕಾಶದಲ್ಲಿ ಮಹಾ ಪ್ರಕಾಶಯುಕ್ತನಾದ ಭಾಸ್ಕರನೊಬ್ಬನು ಉದಯಿಸಿದನೆಂದು ಆತನೇ ಪರಮ ಪೂಜ್ಯ ಮಹಾತ್ಮನು. ತನ್ನ ಕರೆಯನ್ನು ಆಲಿಸಿದ ಕೇವಲ ಸತ್ಕೆಮೊನ್ಯ ಮನುಷ್ಯರೂ ಕೂಡ ವಿದ್ಯುದಾವೇಶಗೊಂಡಂತೆ ಮೇಲೆದ್ದು ಸಮರ ರಂಗಕ್ಕೆ ಧುಮುಕುತಿದ್ದರೆಂದು ಬಳಿಕ ಬಾಬೂ ರಾಜೇಂದ್ರ ಪ್ರಸಾದರಂತಹ ರಾಷ್ಟ್ರ ಪ್ರೇಮಿಗಳು ಸುಮ್ಮನಿರುವರೇ? ತಮ್ಮ ವೃತ್ತಿಯನ್ನು ಬಿಟ್ಟು ರಾಜೇಂದ್ರರು ರಾಷ್ಟ್ರದ ಸೇವೆಗಾಗಿ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಸರ್ವವನ್ನೂ ಅರ್ಪಿಸಲು ಸಿದ್ಧರಾದರು. ಆವರಿಗೆ ರಾಷ್ಟ್ರದೇಳಿಗೆಯೇ ತಮ್ಮ ಏಳಿಗೆಯಾಗಿತ್ತು. ಭರತಖಂಡದ ಸ್ವತಂತ್ರ ಅಭ್ಯುದಯಗಳೇ ತನ್ನ ವ್ಯಕ್ತಿಗತ ಶ್ರೇಯೋಭ್ಯುದಯಗಳೆಂದು ಚೆನ್ನಾಗಿ ಅರಿತಿದ್ದ ರಾಜೇಂದ್ರರು ಮಹಾತ್ಮನ ಕರೆಯನ್ನು ಆಲಿಸಿ ಸತ್ಯಾಗ್ರಹ ಸಮರದಲ್ಲಿ ಧುಮುಕಿದರು. ಅವರಿಗೆ ಮಹಾತ್ಮರ ವಾಣಿಯು ವೇದವಾಕ್ಯವಾಗಿದ್ದಿತು. ಗಾಂಧೀ ವಾದದ ವಿಮಲ ನಿರ್ಮಲ ಪ್ರಾಯೋಗಿಕ ವಾದಿಯನ್ನು ರಾಜೇಂದ್ರರಲ್ಲಿ ಮಾತ್ರ ಕಾಣಬಹುದಲ್ಲದೆ ಇನ್ನಾರಲ್ಲೂ ಕಾಣಲಳವಲ್ಲ. ಸತ್ಯಾಗ್ರಹ ಸಮರದಲ್ಲಿ ಧುಮುಕಿ ರಾಜೇಂದ್ರರು ೧೯೨೧ರಲ್ಲೂ ೧೯೩೧–೩೨ರಲ್ಲೂ ವ್ಯಕ್ತಿಗತ ಸತ್ಯಾಗ್ರಹ ಕಾಲದಲ್ಲೂ ೧೯೪೨ರಲ್ಲಿ ಪ್ರಚಂಡ ರಾಜಕೀಯ ಕ್ರಾಂತಿಯ ಸಂದರ್ಭದಲ್ಲೂ ಸೆರೆಮನೆಯ ವಾಸವನ್ನು ದೀರ್ಘ ಪರಾಲ್ಯಂತ ಅನುಭವಿಸಿದರು.

ಹ್ಯೆಂದು ದೀರ್ಘ ಕಾಲದ ಸರಿಶ್ರಮದಿಂದಾಗಿ ಗೂರಲು (ಅಸ್ತಮ) ರೋಗಕ್ಕೆ ತುತ್ತಾಗಿ ಇಂದೂ ಕೂಡ ರಾಜೇಂದ್ರರು ಅನೇಕ ವೇಳೆ ನರಳುತ್ತಲಿರುವರು.

ರಾಜೇಂದ್ರರು ಅದ್ವಿತೀಯರಾದ ಸಮಾಜ ಸೇವಕರು. ಸಮಾಜದ ಬೇನೆ

THE JUBILEE INSURANCE CO., LTD.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41–A., Richmand Road, Bangalore.

Our Chief Agents:–THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೋದಾರರಿಗೆ ಸರಿಯೂವ ಬೋನಸ್ಸನ್ನು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮಾ ಕಂಪೆನಿಗಳಲ್ಲಿ ಜುಬಿಲಿಯು ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:–ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಡನೆ ಬರೆಯಿರಿ.

ದಿ ಓರಿಯಂಟಲ್ ಎಂಟರ್‌ಪ್ರೈಸಸ್,

13 41-A, ರಿಚ್‌ಮಂಡ್ ರೋಡ್, ಬೆಂಗಳೂರು 1.

ಬೇಸರಿಕೆಗಳನ್ನವರು ಸ್ವಲ್ಪವೂ ಸಹಿಸರು. ಬಿಹಾರಿನಲ್ಲಿ ೧೯೩೪ರಲ್ಲಿ ಭಯಂಕರವಾದ ಭೂಕಂಪವಾಗಿ ಲಕ್ಷಾಂತರ ಜನರು ನಿರಾಶ್ರಿತರಾದಾಗ, ಭೂಕಂಪದಿಂದ ಮನೆ ಹೊರುಗಳನ್ನು ಕಳೆದುಕೊಂಡು ದಿಕ್ಕು ತೋಚದ ಸಅಸಂಖ್ಯಾತ ಭಾರತೀಯರಿಗೆ ರಾಜೇಂದ್ರರು ಸಹಾಯ ಮಾಡಿದರು. ಅಖಿಲ ಭಾರತದಿಂದ ಧನ ಸಂಗ್ರಹಮಾಡಿ ಬಿಹಾರಿನಲ್ಲಿ ಪ್ರಕೃತಿಯ ಕೋಪಕ್ಕೆ ಬಲಿಯಾದ ಜನರಿಗೆ ಧನ ಸಹಾಯ ಮಾಡಿ ಅಖಂಡ ರಾಷ್ಟ್ರದ ಹೊಗಳಿಕೆಗೆ ಪಾತ್ರರಾದರು.

ರಾಷ್ಟ್ರ ಸಂಸ್ಥೆಗಾಗಿ ರಾಷ್ಟ್ರಕ್ಕಾಗಿ ಸಮಾಜಕ್ಕಾಗಿ ರಾಜೇಂದರು ಮಾಡಿದ ಸೇವೆ ತ್ಯಾಗ ಮತ್ತು ಪಟ್ಟ ಕಷ್ಟಗಳನ್ನು ರಾಷ್ಟ್ರವು ಗಣಿಸದೆ ಇರಲಿಲ್ಲ. ಭಾರತ ರಾಷ್ಟ್ರೀಯ ಕಾಂಗ್ರೆಸಿನ ವರ್ಷಾಧ್ಯಕ್ಷರಾಗಿ ರಾಜೇಂದ್ರರ ಅಸೇಕ ಸಲ ಜೈಲುವಾಸಿಯಾಗಿ ರಾಷ್ಟ್ರ ಸಂಸ್ಥೆಯ ಕಾರ್ಯಕಲಾಪಗಳ ಮಹಾ ನಿರ್ದೇಶಕರಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಸಾಧನೆಗೆ ಕಾರಣ ಭೂತರಾದರು. ಭಾರತ ಸ್ವಾತಂತ್ರ್ಯವು ದೊರೆತಮೇಲೆ ಅಸ್ಖಂಡ ಸ್ವಾತಂತ್ರ್ಯ ಗೌರವ ಪಡೆದಿರುವ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಪೀಠವನ್ನು ಅವರೇ ಅಲಂಕರಿಸಿ ರಾಷ್ಟ್ರ ಸಂಸ್ಥೆಯನ್ನು ಬಲಪಡಿಸಿದರು ಭಾರತ ಸರಕಾರದ ಆಹಾರ ಮಂತ್ರಿಗಳಾಗಿ ನೆಹರೂ ಮಂತ್ರಿಮಂಡಲದಲ್ಲಿ ಸೇವೆ ಸಲ್ಲಿಸಿ ಭಾರತದ ಘಟನಾಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಭಾರತವು ಸ್ವತಂತ್ರಗೊಂಡ ಮೇಲೆ ಸ್ವತಂತ್ರ ಭಾರತದ ರಾಜನೀತಿ ವಿಚಾರಗಳ ಕಟ್ಟು ಕಟ್ಟಲೆಗಳ ವಿಧಿ ನಿಷೇಧಗಳನ್ನು ಒಳಗೊಂಡು ಜಗತ್ಪ್ರಸಿದ್ಧ ಸಂವಿಧಾನ ರಚನೆಯ ಕಾಲದಲ್ಲಿ ಘಟನಾ ಸಭೆಯ ಅಧ್ಯಕ್ಷರಾಗಿ ರಾಜೇಂದ್ರ ರಂಥಾ ನೀತಿ ವಿಶಾರದ ವ್ಯಕ್ತಿಗಳ ಮಾರ್ಗದರ್ಶನವು ಅನಿವಾರ್ಯವಾಗಿತ್ತು. ಭಾರತದ ಸಾರ್ವಾಭೌಮ್ಯ ಬಂಧನವನ್ನು ಕಿತ್ತೊಗೆದು ಸಂಪೂರ್ಣ ಸ್ವಾತಂತ್ರ್ಯವುಳ್ಳ ಪ್ರಜಾರಾಜ್ಯವಾಗಿ (Republic) ೧೯೫೦ನೇ ಜನವರಿ ೨೬ರಂದು ಘೋಷಿಸಲ್ಪಟ್ಟಾಗ ಬಾಬು ರಾಜೇಂದ್ರ ಪ್ರಸಾದರು ಭಾರತ ರಿಪಬ್ಲಿಕ್ಕಿನ ಪ್ರಥಮ ಪ್ರೆಸಿಡೆಂಟರಾಗಿ ಘಟನಾ ಸಭೆಯಿಂದ ಆರಿಸಲ್ಪಟ್ಟರು. ಭಾರತ ದಾರ್ಢ್ಯಂತವೂ ಮಹಾಚಕ್ರಾವರ್ತಿ ಪಡೆದು ಪುನರ್ಜೀವಿತವಾದ ಶಾಸನ ಸಭೆಗಳು ರೂಪುಗೊಂಡಾಗ ಭಾರತದ ಪ್ರಮುಖ ಪ್ರಜಾಪ್ರತಿನಿಧಿಗಳು ಬಾಬು ರಾಜೇಂದ್ರಪ್ರಸಾದರನ್ನು ಮಹಾ ರಾಷ್ಟ್ರಪತಿಗಳಾಗಿ ಎರಡನೆಯ ಸಲ ಆರಿಸಿದರು. ಈ ಪದವಿಯು ರಾಜೇಂದ್ರರಂತಹ ಆದರ್ಶ ವ್ಯಕ್ತಿಗಳಿಗಲ್ಲದೆ ಇನ್ಯಾರಿಗೆ ಲಭಿಸಬೇಕು.

ರಾಜೇಂದ್ರರು ಅನಾಸಕ್ತಿಯೋಗದ ಮೂರ್ತಿವೆತ್ತ ಪ್ರತಿಬಿಂಬರು. ಸುಖ ದುಃಖ ಕೀರ್ತಿ ಅಪಕೀರ್ತಿ ಮುಂತಾದ ಜೀವನದ ಸಹಜಸ್ಥಿತಿಗಳನ್ನು ಏಕ ರೀತಿಯಲ್ಲಿ ಭಾವಿಸಿ ಸ್ತುತಿಗೆ ಹೆಣ್ಣಿಪಡಡೆ ನಿಂದೆಗೆ ನೊಂದುಕೊಳ್ಳದೆ ನಿಶ್ಕರಂಗವಾದ ಮಾನಸಿಕ ಸ್ಥಿತಿಯಿಂದ ಜೀವನವನ್ನು ಎದುರಿಸಿದ್ದಾರೆ ಅವರ ಬಾಹ್ಯವೇಶ ಭೂಷಣಗಳು ಆಕರ್ಷಣೀಯವಲ್ಲದ್ದರಿಂದ ಅವರೊಮ್ಮೆ ಕಾರಾಗಾರದಲ್ಲಿರುವಾಗ ಆಂಗ್ಲ ನೊಬ್ಬನು ಕಾರಾಗೃಹಕ್ಕೆ ಪ್ರವೇಶಿಸಿ 'ಈ ಆಪರಾಧಿಯಾರು?' ಎಂದು ಅವರನ್ನು ಸಂಬೋಧಿಸಿ ನುಡಿದರಂತೆ! ತಜ್ಞರೂ ಶಾಸ್ತ್ರತ್ವವೇತ್ತರೂ ಸ್ಥಿತಪ್ರಜ್ಞರೂ ಆದ ರಾಜೇಂದ್ರರೆಂದು ಪಾಪ! ಆ ಆಂಗ್ಲನಿಗಾದರೂ ಏನು ಗೊತ್ತು? ಈ ಮಾತನ್ನು ಆಲಿಸಿದ ರಾಜೇಂದ್ರರು ಮಂದಹಾಸವನ್ನು ಬೀರಿದರಂತೆ.

ರಾಜೇಂದ್ರರ ಮೃದುಸ್ವಭಾವವು ಪ್ರತಿಸ್ಪರ್ಧಿಯ ಕೋಪವನ್ನು ನಿಮಿಷಮಾತ್ರದಲ್ಲಿ ಪರಿಹರಿಸಬಲ್ಲುದು ಕಟ್ಟು ನುಡಿಗಡಿ ಅವರ ಮಂದ ಹಾಸದೆದುರು ಅಳಿದು ಹೋಗುವುವು. ಅವರ ದೃಷ್ಟಿ ವೈಶಾಲ್ಯವನ್ನೂ ಸ್ವರ್ವಸ್ವ ಭಾವವನ್ನೂ ಮುಕ್ತಕಂಠದಿಂದ ಅನೇಕ ಮಹನೀಯರು ಹೊಗಳಿರುವರು. ರಾಜೇಂದ್ರರ ವಿಶಾಲಜೀವನ ಕಾವ್ಯವನ್ನು ಲಲಿತವಾದ ಕವನವಾಗಿ ಪರಿವರ್ತಿಸಲು ಜೇನಿನ ಕೊಡದಲ್ಲಿ ಅದ್ದಿದ ಭುಂಗಾರದ ಲೇಖನಿ ಅಗತ್ಯವೆಂದು ಸರೋಜಿದೇವಿಯವರು ಬಹು ಹೃದಯಂಗವಾಗಿ ರಾಜೇಂದ್ರರನ್ನು ಪ್ರಶಂಸಿಸಿರುವರು.

ಅಧಿಕಾರವು ರಾಜೇಂದ್ರರನ್ನು ಮರಳುಗೊಳಿಸಿಲ್ಲ. ಅವರಿಗೆ ಅಧಿಕಾರಲಾಲಸೆಯಿಲ್ಲ. ರಾಷ್ಟ್ರಸೇವೆಯ ಸೇವೆಗೈಯ್ಯಲು ಮಾತ್ರ ರಾಜೇಂದ್ರರು ಸರ್ವದಾ ಸಿದ್ಧರು ಅಂತರ್ಯದಲ್ಲಿ ಮಹೋನ್ನತವಾದ ಆದರ್ಶವನ್ನೂ ಸ್ಥಿತಪ್ರಜ್ಞತೆಯನ್ನೂ ಹೊಂದಿಕೊಂಡವರಾಗಿ ಭಗವದರ್ಪಣಗೊಂಡ ಆತ್ಮಬುದ್ಧಿಮನಸ್ಸುಗಳಿಂದ ಬಾಹ್ಯ ಪ್ರಪಂಚದಲ್ಲಿ ಕ್ರಿಯಾಶಕ್ತರಾಗಿರುವ ಅವರ ಮಹೋನ್ನತ ಆದರ್ಶಪೂರ್ಣ ವ್ಯಕ್ತಿತ್ವದಲ್ಲಿ ಭಗವದರ್ಪಣದಿಂದ ಶೋಭಾಯಮಾನವಾಗಿ ಭಾರತವು ವಿಶ್ವವನ್ಯ ರಾಷ್ಟ್ರವಾಗಲಿ!!!

= ಸಿಂಹಳ - ಹಿಂದೀಯರ ಹೋರಾಟ =

ಬಹು ದಿವಸಗಳಿಂದ ಸಿಂಹಳ ದ್ವೀಪದಲ್ಲಿ ನೆಲೆಸಿರುವ ಹಿಂದೀಯರಿಗೆ, ಅಲ್ಲಿಯ ಆಯ್ಕೆಯಲ್ಲಿ ಮತದಾನದ ಅಧಿಕಾರವು ಸಿಗದ್ದರಿಂದ, ಆ ವಿಷಯವಾಗಿ ಅಲ್ಲಿ ಹೋರಾಟವು ನಡೆದಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಮತದಾನದ ಅಧಿಕಾರವು ಸಿಗದಿರುವುದೆಂದರೆ, ಅಲ್ಲಿಯ ನಾಗರಿಕರಾಗಲೂ ಅವರಿಗೆ ಅರ್ಹತೆಯಿಲ್ಲವೆಂಬ ಅರ್ಥ.

ಸಿಂಹಲ ದ್ವೀಪಕ್ಕೆ ಬಹು ಶತಃ ಕೂಲಿ ಕಾರ್ಮಿಕರಿಗಾಗಿ ಹೋದವರೇ ಬಹಳ. ಆದರಲ್ಲಿಯೂ ವಿಶೇಷತಃ ಆಟಕ್ಕೆ ಸವಿೂಪ ಇರುವ ಮದರಾಸು, ಮಂಗಳೂರುಗಳ ಕಡೆಯಿಂದ ಹೋದವರೇ ಹೆಚ್ಚು. ಇನ್ನು ಅಲ್ಲಿ ವ್ಯಾಪಾರೋದ್ಯೋಗಗಳಿಗಾಗಿ ಹೋದವರೂ ಇದ್ದಾರೆ. ಅವರು ಸುಸ್ಥಿತಿಯಲ್ಲಿ ಇರುವರಲ್ಲವೆ, ಅವರಂಥವರಿಗೆ ನಾಗರಿಕತ್ವವು ಸಿಗಲು ತೊಂದರೆಯೂ ಆಗುವಂತಿಲ್ಲ.

ಅಲ್ಲಿ ಈಗ ಮುಖ್ಯ ಮಂತ್ರಿಯಾಗಿರುವ ಶ್ರೀಡಡ್ಲೀ ಸೇನಾನಾಯಿಕೆ ಇವರು ಮತ್ತು ಅವರ ಪಕ್ಷವಾದ 'ಯುನೈಟೆಡ್ ನೇಶನಲ್ ಪಾರ್ಟಿ'ಯು ಕೆಲಸಕ್ಕಾಗಿ, ಹಿಂದೀಯರದೇ ಆದ ಒಂದು ಪೋಟಾರ್ ಕಂಪೆನಿಯವರು ತಮ್ಮ ಮೋಟಾರುಗಳನ್ನು ಹೇರಳವಾಗಿ ಮತ್ತು ಬಹಳ ದುಡ್ಡನ್ನು ಕೊಟ್ಟರು. ಮತ್ತು ಇಂದು ನಾಮಕರಣದಲ್ಲಿ ಶ್ರೀ ಎಸ್ ಪಿ ವೈದ್ಯಲಿಂಗವಮ್ ಎಂಬವರನ್ನು ಪಾರ್ಲಿಮೆಂಟಿಗೆ ಸೇನಾನಾಯಿಕೆಯವರು ಹಿಂದೀಯರ ಪ್ರತಿನಿಧಿಯನ್ನಾಗಿ ಆರಿಸಿದ್ದಾರೆ. ಹೀಗೆ ಅಲ್ಲಿಯ ಇಂದಿನ ಅಧಿಕಾರದಲ್ಲಿರುವ ಗುಂಪಿಗೆ ಕೆಲವು ಹಿಂದೀಯರು ಪಿಠೇಯರಾಗಿ ಮತ್ತು ಸಹಕಾರಿಗಳಾಗಿ ನಡೆಯುತಿದ್ದಾರೆ. ಅಂಥವರ ಬೇಳೆಯು ನಿಶ್ಚಯವಾಗಿ ಬೇಯುತ್ತದೆ. ಇದರಿಂದ ಆ ಹಿಂದೀಯರ ವೈಯಕ್ತಿಕ ಲಾಭವೂ ಇದೆ. ಮತ್ತು ಅಲ್ಲಿಯ ಅಧಿಕಾರೀ ವರ್ಗದ ಯೋಜನೆಗಳು ಇಂತಹ ಹೆಸ್ಮಕ ಹಿಂದೀಯರಿಂದ ಫಲಿಸುತ್ತವೆ ಇದೇ ಮಾತನ್ನು ಶ್ರೀ ವೈದ್ಯಲಿಂಗಂ ಇವರಿಗೆ ಅಲ್ಲಿಯ ಆಂತೋಲನ ಹೂಡಿದ ಹಿಂದೀ ಮುಖಂಡರ, ಅನಾಮಕರಣದ ಸ್ಥಳವನ್ನು ನಿರಾಕರಿಸಿರಿ ಎಂದು ಹೇಳಿದಾಗ್ಗೆ ಅದಕ್ಕೆ ಅವರು ಒಪ್ಪಲಿಲ್ಲವೆಂಬ ಸಂಗತಿಯಿಂದ ಮನಗಾಣಬಹುದಾಗಿದೆ.

ಮೊದಲು ಹಿಂದೀಯರಿಗೆ, ಸಿಂಹಳದ ನಾಗರಿಕತ್ವದ ಪ್ರಶ್ನೆಯೇ ಇದ್ದಿಲ್ಲ. ಏಕೆಂದರೆ ಆಗ ಬ್ರಿಟಿಷರು ಹಿಂದೂಸ್ಥಾನ ಮತ್ತು ಸಿಲೋನ್ ಎಂಬ ಹೆಸರಿನಿಂದ ಇತ್ಪವೇತರೂ ಸ್ಥಿತಪ್ರಜರೂ ಆದ ರಾಜೇಂದ್ರರೆಂದು ಪಾಪ! ಆ ಆಂಗ್ಲನಿಗಾದರೂ ಏನು ಗೊತ್ತು? ಈ ಮಾತನ್ನು ಆಲಿಸಿದ ರಾಜೇಂದ್ರರು ಮಂದಗಂಭೀರವಾಗಿ ಮಂದಹಾಸವನ್ನು ಬೀರಿದರಂತೆ.

ರಾಜೇಂದ್ರರ ಮೃದುಸ್ವಭಾವವು ಪ್ರತಿಸ್ಪರ್ಧಿಯ ಕೋಪವನ್ನು ನಿಮಿಷಮಾತ್ರದಲ್ಲಿ ಪರಿಹರಿಸಬಲ್ಲುದು ಕಟ್ಟು ನುಡಿಗಡಿ ಅವರ ಮಂದ ಹಾಸದೆದುರು ಅಳಿದು ಹೋಗುವುವು. ಅವರ ದೃಷ್ಟಿ ವೈಶಾಲ್ಯವನ್ನೂ ಸ್ವರ್ವಸ್ವ ಭಾವವನ್ನೂ ಮುಕ್ತಕಂಠದಿಂದ ಅನೇಕ ಮಹನೀಯರು ಹೊಗಳಿರುವರು. ರಾಜೇಂದ್ರರ ವಿಶಾಲಜೀವನ ಕಾವ್ಯವನ್ನು ಲಲಿತವಾದ ಕವನವಾಗಿ ಪರಿವರ್ತಿಸಲು ಜೇನಿನ ಕೊಡದಲ್ಲಿ ಅದ್ದಿದ ಭುಂಗಾರದ ಲೇಖನಿ ಅಗತ್ಯವೆಂದು ಸರೋಜಿದೇವಿಯವರು ಬಹು ಹೃದಯಂಗವಾಗಿ ರಾಜೇಂದ್ರರನ್ನು ಪ್ರಶಂಸಿಸಿರುವರು.

ಅಧಿಕಾರವು ರಾಜೇಂದ್ರರನ್ನು ಮರಳುಗೊಳಿಸಿಲ್ಲ. ಅವರಿಗೆ ಅಧಿಕಾರಲಾಲಸೆಯಿಲ್ಲ. ರಾಷ್ಟ್ರಸೇವೆಯ ಸೇವೆಗೈಯ್ಯಲು ಮಾತ್ರ ರಾಜೇಂದ್ರರು ಸರ್ವದಾ ಸಿದ್ಧರು ಅಂತರ್ಯದಲ್ಲಿ ಮಹೋನ್ನತವಾದ ಆದರ್ಶವನ್ನೂ ಸ್ಥಿತಪ್ರಜ್ಞತೆಯನ್ನೂ ಹೊಂದಿಕೊಂಡವರಾಗಿ ಭಗವದರ್ಪಣಗೊಂಡ ಆತ್ಮಬುದ್ಧಿಮನಸ್ಸುಗಳಿಂದ ಬಾಹ್ಯ ಪ್ರಪಂಚದಲ್ಲಿ ಕ್ರಿಯಾಶಕ್ತರಾಗಿರುವ ಅವರ ಮಹೋನ್ನತ ಆದರ್ಶಪೂರ್ಣ ವ್ಯಕ್ತಿತ್ವದಲ್ಲಿ ಭಗವದರ್ಪಣದಿಂದ ಶೋಭಾಯಮಾನವಾಗಿ ಭಾರತವು ವಿಶ್ವವನ್ಯ ರಾಷ್ಟ್ರವಾಗಲಿ!!!

ಇಂದು ಸಿಂಹಳದಲ್ಲಿರುವ ಹಿಂದೀಯರ ನಿಜವಾದ ಪರಿಸ್ಥಿತಿಯೇ ಏನಿದೆ ಎಂಬುವದನ್ನು ನೋಡುವುದೂ ಅವಶ್ಯವಿದೆ. ಹಿಂದೀಯರ ಮತ್ತು ಸಿಂಹಳೀಯರ ಸಂಬಂಧವು ಇಂದು ನಿನ್ನಿನದಲ್ಲ. ಶತಮಾನಗಳಿಂದ ಅವರಲ್ಲಿ ಪರಸ್ಪರ ಅಕ್ಕೀಯತೆಯು ಆಳವಾಗಿ ಬೇರಿದೆ. ಸಿಂಹಳೀಯರಲ್ಲಿ ಕೂಡ, ಹಿಂದೀಯರಿಗೆ ವರ್ತಾಧಿಕಾರ ಅರ್ಥಾತ್ ಅಲ್ಲಿಯ ನಾಗರಿಕ ಅಧಿಕಾರವು ದೊರೆಯಬೇಕೆನ್ನುವವರೇ ಹೆಚ್ಚಾಗಿ ಇದ್ದಾರೆ.

ಮೊನ್ನಿನ ಆಯ್ಕೆಯಲ್ಲಿ ಜನರು ಕೊಟ್ಟ ಮತಗಳನ್ನು ನೋಡಿದರೆ ಈ ಮಾತು ಸಿದ್ಧವಾಗುತ್ತದೆ. ಇವರೂ ೨೩ ಲಕ್ಷ ಮತಗಳು ಒಟ್ಟು ಅಲ್ಲಿ ಹಾಕಲ್ಪಟ್ಟವು ಅವುಗಳಲ್ಲಿ ಸುಮಾರು ೧೧೦ ಲಕ್ಷ ಮತಗಳು 'ಯುನೈಟೆಡ್ ನ್ಯಾಶನಲ್ ಪಾರ್ಟಿ'ಗೆ ದೊರೆತವು. ಇನ್ನು ಎರಡು ಪಕ್ಷಗಳು ಬೇರೆ ಬೇರೆಯಾಗಿ ಸ್ಪರ್ಧೆ ಮಾಡಿದವು. ಈ ಮೂರೂ ಪಾರ್ಟಿಗಳಿಗೆ ಕೂಡಿ ೧೧ ಲಕ್ಷ ಮತಗಳು ದೊರೆತವು. ಈ ಪಕ್ಷಗಳು ಹಿಂದೀಯರ ವಿರೋಧಿಗಳು. ಇದೆಲ್ಲವನ್ನು ಹಿಡಿದರೂ ದಾನ ಮಾಡಲ್ಪಟ್ಟ ಒಟ್ಟು ಮತಗಳ ಅರ್ಧಕ್ಕಿಂತ ಕಡಿವೆ ಮತಗಳು ಈ ಮೂರು ಪಕ್ಷಗಳಿಗೆ ದೊರೆತವು ಉಳಿದ ಪಕ್ಷಗಳಲ್ಲಿ ಮತ್ತು ಸ್ವತಂತ್ರವಾಗಿ ಆರಿಸಿ ಬಂದ ಹುರಿಯಾಳುಗಳಲ್ಲಿ, ಕೆಲವರು ಸಂಪೂರ್ಣವಾಗಿ ಹಿಂದೀಯರಿಗೆ ಅನುಕೂಲರು, ಕೆಲವರು ಅರ್ಧ ಮರ್ಧ ಅನುಕೂಲರು ಇದ್ದಾರೆ. ಆದರೆ ಯುನೈಟೆಡ್ ನ್ಯಾಶನಲ್ ಪಾರ್ಟಿಗೆ ಹೆತ್ತೇ ಲಕ್ಷ ಮತಗಳು ಸಿಕ್ಕರೂ, ಮತದಾನದಲ್ಲಿಯ ಸೂಕ್ಷ್ಮಗಳ ಮೂಲಕ, ಅಡಿಕ್ಕೆ ನೂರರಲ್ಲಿ ೬೦ ಸ್ಥಳಗಳು ದೊರೆತಿವೆ.

ಹೀಗೆ ಹಿಂದೀಯರ ದೃಷ್ಟಿಯಿಂದ ಈ ವಾತಾವರಣವು ನಿರಾಶಾದಾಯಕವಾಗಿಲ್ಲ. ಮತ್ತು ಈ ಪ್ರಶ್ನೆಯು ಜಾತೀಯ ಅಥವಾ ಭಾಷೆಯ ತಳಹದಿಯ ಮೇಲೆ ನಿಂತಂಥದೂ ಆಗಿಲ್ಲ.

ಹಿಂದೀಯರ ಮತದಾನದ ಅಧಿಕಾರವನ್ನು ಕಸಿದುಕೊಳ್ಳುವ ವಿಚಾರವು ಮತ್ತು ಆ ಸಂಬಂಧವಾದ ವ್ಯವಸ್ಥೆಯನ್ನು ಈ ಆಯ್ಕೆಯು ಪೂರ್ವದಲ್ಲಿ ಗಲಭೆಗಳ ಹಿಂದೆಯೇ ಪ್ರಾರಂಭಿಸಲ್ಪಟ್ಟಿತ್ತು. ಆದರೆ ಹಿಂದೀಯರು ಆ ಬಗ್ಗೆ ಅಗಿನಿಂದಿಲೇ ತಮ್ಮ ಹೋರಾಟವನ್ನು ಮೊದಲು ಮಾಡಲಿಲ್ಲ.

ಮುಖ್ಯ ಮಂತ್ರಿಗಳಾದ ಸೇನಾನಾಯಿಕೆಯವರು ಪರದೇಶೀಯರ ವಿಭಾಗವನ್ನು ತಮ್ಮ ಕಡೆಗೆ ಇಟ್ಟುಕೊಂಡಿದ್ದಾರೆ. ಈ ಪ್ರಶ್ನೆಯ ಬಗ್ಗೆ ಹಲಕೆಲವು ಮೂರ್ಖಾಡುಗಳನ್ನು ಅವರು ಮಾಡುವ ಲಕ್ಷಣವು ಕಾಣುತ್ತಿದೆ. ಆದರೆ ಅದರಿಂದ ಹಿಂದೀಯರಿಗೆ ತೃಪ್ತಿಯಾಗಲಾರದು. ಹಿಂದೀಯರು ತಮ್ಮ ಕಾರ್ಯ ಸಾಧಿಸಿಕೊಳ್ಳಲು ಇನ್ನೂ ಕೆಲವು ಕಾಲ ನಿಕರದ ಹೋರಾಟ ನಡೆಸದ ಹೊರತು ಗತ್ಯಂತರವಿಲ್ಲ.

'ಜೈ ಹಿಂದ್'

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಶಾಲಾ ಸಮೂಜದ

ಉದ್ಘಾಟನೋತ್ಸವ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಶಾಲಾ ಸಮೂಜದ ಉದ್ಘಾಟನೋತ್ಸವವು ತಾ. ೫ನೇ ಶನಿವಾರ ಕೂಡಗಿನ ಪ್ರಧಾನ ಮಂತ್ರಿಗಳಾದ ಮಾನ್ಯ ಕೆ. ಮಲ್ಲಪ್ಪನವರಿಂದ ನೆರವೇರಿಸಲ್ಪಟ್ಟಿತು. ದೇಶದ ಪ್ರಧಾನ ಮಂತ್ರಿಗಳಾದ ಮಾನ್ಯ ಪಿ. ಎಂ. ಪೂಣಚ್ಚನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಪ್ರಧಾನ ಮಂತ್ರಿಗಳು ಪ್ರಥಮತಃ ರಾಷ್ಟ್ರೀಯ ಧ್ವಜಾರೋಹಣವನ್ನು ಮಾಡಿ ಧ್ವಜವಂದನೆಯ ತರುವಾಯ ರಾಷ್ಟ್ರೀಯ ಬಾಲ ಸೈನ್ಯದವರ ಗೌರವ ಪ್ರದರ್ಶನಗಳನ್ನು ಸ್ವೀಕರಿಸಿ ಬಾಲ ಸೈನ್ಯವನ್ನು ಪರಿಶೀಲಿಸಿ ಸಂತೃಪ್ತಿಯನ್ನು ವ್ಯಕ್ತಪಡಿಸಿದರು. ಉದ್ಘಾಟನಾ ಸಮಾರಂಭದ ಪ್ರಾರಂಭ ಸ್ವಾಗತ ಭಾಷಣವನ್ನು ಮಾಡುತ್ತಾ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಎಂ. ಮುತ್ತಣ್ಣನವರು ಜನಪ್ರಿಯರಾದ ನಾಡ ಮುಖಂಡರನ್ನು ಸಮೂಜಕ್ಕೆ ಆದರದಿಂದ ಸ್ವಾಗತೀಕರಿಸಿದರು. ದೇವೀ ಡಿಬೇಟಿಂಗ್ ಸೊಸೈಟಿ' ಎಂಬ ಹೆಸರಿನಿಂದ ಇಷ್ಟರವರೆವಿಗೂ ಕಾರ್ಯನಿರ್ವಹಣವನ್ನು ಮಾಡುತಿದ್ದ ಸೆಂಟ್ರಲ್ ಹೈಸ್ಕೂಲಿನ ಕೂಟವನ್ನು 'ಸೆಂಟ್ರಲ್ ಶಾಲಾ ಸಮೂಜ' ಎಂಬ ಹೊಸ ನಾಮಕರಣದಿಂದ ಕರೆದುದರ ಉದ್ದಿಶ್ಯವನ್ನು ವಿವರಿಸುತ್ತಾ ಮುಖ್ಯೋಪಾಧ್ಯಾಯರು ಶಾಲೆಯ ನಿತ್ಯದ ಜೀವನದ ಸರ್ವ ವಿಷಯಗಳನ್ನು ಕೂಟವು ಒಳಗೊಳ್ಳಬೇಕಾದುದರಿಂದ ವಿದ್ಯಾರ್ಥಿಗಳ ಮಾನಸಿಕ, ಶಾರೀರಿಕ, ಸಾಮೂಜಿಕ, ಸಾಂಸ್ಕೃತಿಕ ನೈತಿಕ ಜೀವಣಿಗೆಗಳು ಸಂಘದಿಂದ ಸಾಧಿಸಲ್ಪಡಬೇಕಾದ್ದರಿಂದ ಹೆಚ್ಚು ವ್ಯಾಪಕ ಶಬ್ದವಾದ ಶಾಲಾ ಸಮೂಜ ಎಂಬ ಹೆಸರನ್ನು ವಿದ್ಯಾರ್ಥಿಗಳ ಸಂಘಕ್ಕೆ ಕೊಟ್ಟರುವೆಂತಲೂ ಸಮೂಜದ ಒಂದು ಅಂಗವಾದ ಚರ್ಚಾ ಕೂಟವನ್ನು ಹಿಂದಿನ ದೇವಿ ಡಿಬೇಟಿಂಗ್ ಸೊಸೈಟಿ ಎಂಬ ಹೆಸರಿನಿಂದಲೇ ಸಂಬೋಧಿಸುವುದಾಗಿಯೂ ವಿವರಿಸಿದರು.

ಗೃಹ ಮಂತ್ರಿಗಳು ಸಮೂಜದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ವಿದ್ಯೆಯಿಂದ ಮಾನವನ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಿಕೊಡಬಲ್ಲ ಮಹಾ ಸಾಧನವೆಂದೂ, ವಿದ್ಯಾರ್ಥಿಗಳು ವಿದ್ಯಾರ್ಥಿ ದೆಸೆಯಲ್ಲಿ ಜ್ಞಾನಾರ್ಜನೆ ಮಾಡುವಾಗ ಉತ್ತಮವಾದ ಗುಣ ನಡತೆಗಳನ್ನೂ ಶೀಲವನ್ನೂ ಕಟ್ಟಿಕೊಳ್ಳಬೇಕೆಂದೂ ನುಡಿದರು. ಉತ್ತಮವಾದ ಶೀಲದಿಂದಲೇ ರಾಷ್ಟ್ರೀಯ ಪುನರ್ರಚನೆಗೆ ಅಗತ್ಯವಾದ ಶಿಸ್ತು ಉಂಟಾಗುವುದೆಂದೂ ಶಿಸ್ತಿಲ್ಲದ ಜೀವನವು ದೇಶದ ಅವನತಿಗೆ ಕಾರಣವೆಂದೂ ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಕ್ಷಣ ಕಲಿತು ದೇಶದ ಕಾಯಿದೆ ಕಾನೂನುಗಳನ್ನು ಪಾಲಿಸಲು ಪ್ರಯತ್ನಿಸಬೇಕೆಂದೂ ಬೋಧಿಸಿದರು. ಮಾತ್ರವಲ್ಲದೆ ವಿದ್ಯಾರ್ಥಿಗಳು ಬಿಡುವಿದ್ದಾಗ ಗ್ರಾಮಾಂತರಗಳಿಗೆ ಹೋಗಿ ಶೇಕಡಾ ಎಪ್ಪತ್ತಕ್ಕಿಂತ ಹೆಚ್ಚು ಅನಕ್ಷರಸ್ಥರಾದ ದೇಶಬಾಂಧವರಿಗೆ ತಾವು ತಿಳಿದುದರ ಕೆಲವಂಶವನ್ನಾದರೂ ಬೋಧಿಸಿ ಜನ ಜಾಗೃತಿಯನ್ನು ಉಂಟು ಮಾಡಿ ಸಮೂಜ ಸೇವೆಯನ್ನು ಮಾಡಬೇಕೆಂದೂ ಉಪದೇಶಿಸಿದರು.

ತರುವಾಯ ಮುಖ್ಯ ಮಂತ್ರಿಗಳು ಅಧ್ಯಕ್ಷ ಪೀಠದಿಂದ ಮಾತನಾಡುತ್ತ ವಿದ್ಯಾರ್ಥಿಯ ಜೀವನವು ಮಾನವ ಜೀವಿತದ ಇತರ ಭಾಗಗಳಿಗಿಂತಲೂ ಹೆಚ್ಚು ಸಂತೋಷಪೂರ್ಣವೂ ಆನಂದಮಯವೂ ಆಗಿರುವದೆಂದೂ ಇಂಥಾ ಜೀವನದಲ್ಲಿ ವಿದ್ಯಾರ್ಥಿಗಳು ರಾಷ್ಟ್ರದ ಸತ್ಪ್ರಜೆಗಳಾಗಿ ಬಾಳಲು ಯಾವ ರೀತಿಯಾದ ಪ್ರತ್ಯೇಕತ್ವವನ್ನು ಕಟ್ಟಿಕೊಳ್ಳಬೇಕೆಂದೂ ವಿವರಿಸಿದರು. ಶಾಲಾ ಸಮೂಜವೆಂಬ ಹೊಸ ನಾಮಕರಣವನ್ನು ಸಮರ್ಥಿಸಿ ವಿದ್ಯಾರ್ಥಿ ಜೀವನದ ಬಹಿರ್ಮುಖ ಚಟುವಟಿಕೆಗಳನ್ನು ಒಳಗೊಂಡಿರುವ ಸಂಘಕ್ಕೆ ಶಾಲಾ ಸಮೂಜವೆಂಬ ಹೆಸರು ಅಕ್ಷರಶಃ ಒಪ್ಪುತ್ತದೆಂದು ನುಡಿದರು. ಇಂಗ್ಲಂಡ್ ಅಮೇರಿಕ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳು ಪ್ರಗತಿಪರ ರಾಷ್ಟ್ರಗಳಾಗಿ ಬೆಳೆದು ಮಹಾ ಯುದ್ಧಗಳನ್ನು ಗೆಲ್ಲಲು ಆ ರಾಷ್ಟ್ರದ ಪ್ರಜೆಗಳ ಕ್ರಮಬದ್ಧವೂ ನಿಯಮಪೂರ್ಣವೂ ಶಿಸ್ತಿನಿಂದ ಕೂಡಿದುದೂ ಆದ ಜೀವನ ವಿಧಾನವೇ ಕಾರಣವೆಂದೂ ರಾಷ್ಟ್ರಕ್ಕಾಗಿ ಸರ್ವವನ್ನೂ ಧಾರೆಯೆರೆಯಲು ಆ ದೇಶಗಳು ಹೇಗೆ ಸರ್ವದಾ ಸಿದ್ಧವಾಗಿರುವೆಂತಲೂ ದೃಷ್ಟಾಂತಗಳೊಡನೆ ವಿವರಿಸಿದರು. ಇಂಗ್ಲಂಡ್ ದೇಶದಲ್ಲಿ ಸಾಮಾನ್ಯ ನೌಕರರಾಗಲೀ ಲಂಚ ಸ್ವೀಕಾರ ಮುಂತಾದುವುಗಳಿಗೆ ಎಂದೂ ಹೋಗದೆ ಕರ್ತವ್ಯನಿಷ್ಠರಾಗಿ ಹೇಗೆ ಕಾರ್ಯನಿರ್ವಹಣ ಮಾಡುತ್ತಿರುವರೆಂದೂ ಪ್ರಜೆಗಳು ಆಹಾರ ನಿಯಂತ್ರಣ ಕಾಲದಲ್ಲಾಗಲೀ ಹೇಗೆ ತಮಗೆ ಬರತಕ್ಕ ಅಂಶ ಮಾತ್ರದಿಂದಲೇ ತೃಪ್ತರಾಗುತ್ತಲಿದ್ದರೆಂದೂ ಶಾಲೆಗಳಲ್ಲಿ ಆಧ್ಯಾಪಕರು ವಿದ್ಯಾರ್ಥಿಗಳನ್ನು ಶಿಕ್ಷಿಸದೆ ಅವರಿಗೆ ವಿನಯ, ಶೀಲ, ನಡತೆ, ಶಿಸ್ತುಗಳನ್ನು ಹೇಗೆ ಕಲಿಸ ತಕ್ಕರೆಂದೂ ಆ ಮಾದರಿಗಳನ್ನು ಅನುಸರಿಸಿದರೆ ಮಾತ್ರ ನಮ್ಮ ಹಿರಿಯರು ಸಂಪಾದಿಸಿ ಕೊಟ್ಟ ಸ್ವರಾಜ್ಯವನ್ನು ಕಾಪಾಡಿಕೊಂಡು ಅನುಭವಿಸಲು ನಾವು ಶಕ್ತರಾದೇವು ಎಂದೂ ಬೋಧಪ್ರದವಾದ ಭಾಷಣ ಮಾಡಿದರು.

ಶಾಲೆಯ ಚುನಾಯಿತ ಬಾಲನಾಯಕರು ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರೀಯ ಬಾಲ ಸೈನ್ಯದವರಿಗೆ ಬಹುಮಾನಿಸಲ್ಪಟ್ಟ ಪಾರಿತೋಷಕವು ಅಧ್ಯಕ್ಷರಿಂದ ಶಾಲೆಗೆ ಕೊಡಲ್ಪಟ್ಟಿತು. ಜಯ ಜಯಕಾರಗಳೊಡನೆ ಸಭೆಯು ಮುಕ್ತಾಯಗೊಂಡಿತು.

THE CANARA BANKING CORPORATION LIMITED, UDIPI.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್, ಉಡುಪಿ.

ನೋ ಟೀ ಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಪಗಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಮೇಲಣ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡಬೆ ಇದ್ದುದರಿಂದಲೂ, ಆ ಬಗ್ಗೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕೆಲವರಿಗೆ ಪಾವತಿಯಾಗಿ, ಕೆಲವರಿಗೆ ಪಾವತಿಯಾಗದೆ ವಾಪಾಸು ಬಂದಿರುವುದರಿಂದಲೂ, ಸದರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಸದರಿಯವರೆಲ್ಲ ಈಡಿಟ್ಟ ನಗಗಳನ್ನು ತಾರೀಕು 12-7-52ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ ತಾ. 19-7-52ನೇ ಶನಿವಾರ ಅಪರಾಹ್ನ ಗಂಟೆ 1ಕ್ಕೆ ಯೂ ಬ್ಯಾಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಹ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು.

ಜ. ನಂ.	ಸಾಲದ ನಂ.	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು.
1.	186/1949	ಶ್ರೀ ಹೆಚ್. ಸಿ. ಬೋರ್‌ಲಿಂಗಯ್ಯ, S/o., ಚೆನ್ನಯ್ಯ, ಹಾತೂರು, ಗೋಣಿಕೊಪ್ಪಲು ಪೋಸ್ಟ	ರೂ. 130
2.	456 ,,	ಜನಾಬ್ ಮಾಣಿ ಅಬು ಮಹಮದ್, C/o. ಮಾಣಿ ಅಬ್ದುಲ್ ಖಾದರ್ ಸಾಹೇಬ್ & ಸನ್ಸ್, ವೀರಾಜಪೇಟೆ	1800
3	501 ,,	ಜನಾಬ್ ಮಿತಲ್ ಹರಿಯಲ್ ಮೂಹನೆ, S/o., ಬೀರಾನೆ, ಬಡಗಿ, ವಿನಾಪೇಟೆ, ವೀರಾಜಪೇಟೆ	20
4.	513 ,,	ಜನಾಬ್ ಎಂ. ಪಿ. ಕುಂಞಾಂಬು, S/o. ಕುಂಞಾ ಮೂಸೆ, ವ್ಯಾಪಾರಿ, ವೀರಾಜಪೇಟೆ	425
5	577 ,,	ಶ್ರೀ ನಂಬುಡುಮಾಡ ಮುತ್ತಣ್ಣ, S/o, ದೇವಯ್ಯ, ಕಂಡಂಗಾಲ ಗ್ರಾಮ, ವೀರಾಜಪೇಟೆ	90
6	582 ,,	ಶ್ರೀ ಮೂತಂಡ ಐಯ್ಯಮ್ಮ, S/o. ನಂಜಪ್ಪ, ಬೆಳ್ಳಿಮಾಡು ಗ್ರಾಮ, ಮೂರ್ನಾಡು ಪೋಸ್ಟ	100
7.	600 ,,	ಶ್ರೀ ಹೆಚ್. ಸಿ. ಬೋರ್‌ಲಿಂಗಯ್ಯ, S/o, ಚೆನ್ನಯ್ಯ, ಹಾತೂರು, ಗೋಣಿಕೊಪ್ಪಲು	125
8.	773 ,,	ಶ್ರೀಮತಿ ಕೇಮೂಬಾಯಿ, ವೀರಾಜಪೇಟೆ	40
9	837 ,,	ಜನಾಬ್ ಎಸ್. ಅಬ್ದುಲ್ ಅಜೀಸ್, ವ್ಯಾಪಾರಿ, ವೀರಾಜಪೇಟೆ	90
10.	134/1950	ಜನಾಬ್ ಸೈಯ್ಯದ್ ಹುಸೇನ್, S/o. ಸೈಯ್ಯದ್ ಆದಾಮ್, ಬೆಣ್ಣೆವ್ಯಾಪಾರಿ, ವೀರಾಜಪೇಟೆ	250
11.	652 ,,	ಶ್ರೀ ಬಂಟರ ರಾಮಣ್ಣರೈ, S/o. ವೆಂಕಪ್ಪರೈ, ದೇವಾಂಗಬೀದಿ, ವೀರಾಜಪೇಟೆ	30
12.	788 ,,	ಶ್ರೀ ಟಿ. ವಿ. ರಾಮನಾಯರ್, S/o. ರಾಮನಾಯರ್ ಮೇಸ್ತ್ರಿ, ಪೆರಂಬುಕೊಲ್ಲಿ ಎಸ್ಟೇಟ್, ಜೆಟ್ಟಳ್ಳಿ	40
13.	351/1951	ಶ್ರೀ ವೂಜೆಟ್ಟಿರ ವೇದಪ್ಪ, S/o. ಗಣಪತಿ, ಬಾಳುಗೋಡು ಗ್ರಾಮ, ವೀರಾಜಪೇಟೆ	35

ಬ್ಯಾಂಕಿನ ಆಫೀಸು:-ವೀರಾಜಪೇಟೆ,
ತಾರೀಕು:-23-6-1952

U. MADHAVACHAR,
Agent.

ವಿನೋಬಾ ಭಾವೆಯ ಉಪದೇಶ.

ರೇಬರೈಲಿಯಲ್ಲಿ ಒಂದು ಬೃಹತ್ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತ ಆಚಾರ್ಯ ವಿನೋಬಾ ಭಾವೆಯವರು, 'ಎಲ್ಲಾ ರಾಜಕೀಯ ಪಕ್ಷಗಳನ್ನು ವಿಸರ್ಜನೆಗೊಳಿಸಿ, ಸಮೂಜ ಸೇವಕರ ಒಂದೇ ಪಕ್ಷವನ್ನು ಕಟ್ಟಿಕೊಂಡರೆ ಮಾನವತೆಯ ಏಳ್ಗೆಗೆ ತುಂಬಾ ಪ್ರಯೋಜನವಾದೀತು' ಎಂಬುದಾಗಿ ರಾಜಕೀಯ ಮುಖಂಡರನ್ನುದ್ದೇಶಿಸಿ ಹಿತೋಕ್ತಿಗಳನ್ನಾಡಿದರು.

ಜಿನ್ನಾರವರ ಜೀವನ ಚರಿತ್ರೆ

ಸುಮಾರು ೩೦ ಗ್ರಂಥಗಳ ಲೇಖಕರಾದ ವಿ. ಹೆಕ್ಟರ್ ಬೊಲಿಥೊ ಎಂಬ ಬ್ರಿಟಿಷ್ ಲೇಖಕರನ್ನು ಪಾಕಿಸ್ತಾನ ಸರಕಾರವು ದಿವಂಗತ ಮಹಮ್ಮದಾಲಿ ಜಿನ್ನಾರವರ ಜೀವನ ಚರಿತ್ರೆ ಬರೆಯುವ ಕೆಲಸಕ್ಕೆ ಈ ಮೊದಲೇ ನೇಮಿಸಿತ್ತಷ್ಟೆ? ಆದರೆ, ಪ್ರಸ್ತುತ ಆ ಕಾರ್ಯಭಾರವನ್ನು ಸ್ವತಹ ಜಿನ್ನಾರವರ ಸೋದರಿ ಮಿಸ್ ಫಾತಿಮಾ ಜಿನ್ನಾರವರು ವಹಿಸುವರೆಂದು ಕೇಳಬರುತ್ತದೆ. ವ್ಯಾಯಶಃ ಆ ಕಾರಣದಿಂದಾಗಿಯೇ, ಜಿನ್ನಾರವರ ಜೀವನ ಚರಿತ್ರೆಗೆ ಸಂಬಂಧಪಟ್ಟ ಕೆಲವು ಪ್ರಮುಖ ದಾಖಲೆಗಳನ್ನು ಅವರು ತಮ್ಮ ವಶದಲ್ಲಿಯೇ ಇಟ್ಟುಕೊಂಡಿರುವರು. ಮಿ. ಹೆಕ್ಟರ್ ಬೊಲಿಥೊರವರು ಪಾಕಿಸ್ತಾನಕ್ಕೆ ಆಗಮಿಸಿದಂದಿನಿಂದ ಈ ವರೆಗೆ ಜಿನ್ನಾರವರ ಸವಿೂಪದ ಪರಿಚಯವಿದ್ದ ಸುಮಾರು ೭೦ ಮಂದಿಯನ್ನು ಭೇಟಿಯಾಗಿ ಅವರಿಂದ ಜಿನ್ನಾರವರ ಜೀವನ ಚರಿತ್ರೆಗೆ ಅವಶ್ಯವಿರುವ ಮಾಹಿತಿಯನ್ನು ಸಂಗ್ರಹಿಸಿರುವರು.

ಕೊಡಗು

ತಾ. ೨೭-೬-೧೯೫೬ನೇ ಶುಕ್ರವಾರ

ಸ್ಕೂಲ್‌ಫೈನಲ್ ಪರೀಕ್ಷಾ ಫಲಿತಾಂಶ.

ಈ ವರ್ಷದ ಸ್ಕೂಲ್‌ಫೈನಲ್ ಪರೀಕ್ಷಾ ಫಲಿತಾಂಶ ಹೊರಬಿದ್ದಿದೆ. ಕೊಡಗಿನಿಂದ ಪರೀಕ್ಷೆಗೆ ಕೂತ ೩೯೭ ವಿದ್ಯಾರ್ಥಿಗಳಲ್ಲಿ ೧೯೯ ಜನರು ಅಂದರೆ ಶೇಕಡ ೫೦ ರಂತೆ ತೇರ್ಗಡೆಯಾಗಿದ್ದಾರೆ. ಕಳೆದ ವರ್ಷ ೨೩೨ ವಿದ್ಯಾರ್ಥಿಗಳಲ್ಲಿ ೧೨೪ ಜನರು ಅಂದರೆ ಶೇಕಡ ೫೩ ರಂತೆ ತೇರ್ಗಡೆಯಾಗಿದ್ದರು. ಕಳೆದ ವರ್ಷಕ್ಕಿಂಥಾ ಶೇಕಡ ಪರಿಮಾಣ ಕಡಿಮೆಯಾದುದು ಶುಭ ಚಿಹ್ನೆಯಲ್ಲ. ಈ ಬಗ್ಗೆ ಎಳ್ಳಷ್ಟೂ ಶಾಲೆಗಳನ್ನು ಟೀಕಿಸಲಾಗುವದಿಲ್ಲ. ಕೊಡಗಿನ ಹೈಸ್ಕೂಲುಗಳಲ್ಲಿ ಕಳೆದ ವರ್ಷ ಸೋಮವಾರಪೇಟೆ ಹೈಸ್ಕೂಲು ಪ್ರಥಮ ಸ್ಥಾನ ಪಡೆದಿತ್ತು. ಮಡಿಕೇರಿ ಕಾನ್ವೆಂಟು ಎರಡನೇ ಸ್ಥಳಪಡೆದಿತ್ತು. ಪೊನ್ನಂಪೇಟೆ ಹೈಸ್ಕೂಲು ಮೂರನೆ ಸ್ಥಾನ ಪಡೆದಿತ್ತು. ಈ ವರ್ಷ ಕಾನ್ವೆಂಟ್ ಹೈಸ್ಕೂಲು ನೂರಕ್ಕೆ ೮೭ ರಂತೆ ಫಲಿತಾಂಶ ಪಡೆದು ಪ್ರಥಮ ಸ್ಥಾನಕ್ಕೆ ಬಂದಿದೆ, ಪೊನ್ನಂಪೇಟೆ ಹೈಸ್ಕೂಲು ನೂರಕ್ಕೆ ೭೪ ರಂತೆ ಫಲಿತಾಂಶ ದೊರಕಿಸಿ ಎರಡನೇ ಸ್ಥಳ ಪಡೆದಿದೆ ನಾಪೋಕ್ಲು ಮತ್ತು ಸೋಮವಾರಪೇಟೆ ಶಾಲೆಗಳು ಮೂರನೇ ಸ್ಥಾನಕ್ಕೆ ಬಂದಿವೆ. ಈ ಶಾಲೆಗಳ ಈ ದಕ್ಷತೆಗಾಗಿ ಇವುಗಳ ಅಧ್ಯಾಸಕ ವರ್ಗವನ್ನೂ, ವಿದ್ಯಾರ್ಥಿಗಳನ್ನೂ ಮೆಚ್ಚಬೇಕಾಗಿದೆ

ಇಲ್ಲಿ ಪೊನ್ನಂಪೇಟೆ ಹೈಸ್ಕೂಲಿನ ವಿಚಾರ ಒಂದು ಮಾತು ಎತ್ತಿ ಹೇಳಬೇಕಾಗಿದೆ ಈ ಶಾಲೆಯು ೧೯೪೯ ರಲ್ಲಿ ಶೇಕಡ ೨೩ ರಂತೆ, ೧೯೫೦ ರಲ್ಲಿ ೨೫ ರಂತೆ, ೧೯೫೧ರಲ್ಲಿ ೬೦ ರಂತೆ ಮತ್ತು ಈ ವರ್ಷ ಶೇಕಡ ೭೪ರಂತೆ ಫಲಿತಾಂಶವನ್ನು ಪಡೆದು ಮುಂದುರಿಯುತ್ತಿದೆ. ಕೊಡಗಿನ ಶಾಲೆಗಳಲ್ಲಿ ದ್ವಿತೀಯಸ್ಥಾನ ಪಡೆದಿರುವ ಈ ಶಾಲೆಯು ಹೆಜ್ಜೆ ಹಿಂದೆ ಹಾಕದೆ ಮುಂದಡಿ ಇಡಲಿ

ಕಾನ್ವೆಂಟು ತನ್ನ ಫಲಿತಾಂಶಕ್ಕಾಗಿ ಹಿಂದಿನಿಂದಲೂ ಕೀರ್ತಿ ಪಡೆದಿತ್ತು ಆದರೆ ಮಧ್ಯೆ ಅಂದರೆ ೧೯೫೦ರಲ್ಲಿ ಫಲಿತಾಂಶ ಶೇಕಡ ೫೫ ಕ್ಕೆ ಇಳಿದು ಹೋಗಿತ್ತು. ಈ ವರ್ಷ ಆದು ತನ್ನ ಹಿಂದಿನ ಸ್ಥಾನವನ್ನು ಪಡೆದ ಕೀರ್ತಿಶಾಲಿಯಾಗಿದೆ.

ಸೋಮವಾರಪೇಟೆ ಹೈಸ್ಕೂಲು ಒಂದು ಹೆಜ್ಜೆ ಹಿಂದೆ ಹಾಕಿದ್ದರೂ ತೃತೀಯ ಸ್ಥಾನದಲ್ಲಿದೆ. ನಾಪೋಕ್ಲು ಹೈಸ್ಕೂಲು ಹೆಜ್ಜೆ ಮುಂದಿಕ್ಕಿ ತೃತೀಯ ಸ್ಥಾನಕ್ಕೆ ಬಂದಿದೆ. ಕಳೆದ ವರ್ಷ ಅತೀ ಕನಿಷ್ಟ ಫಲಿತಾಂಶ ಪಡೆದ ಮೈಕೇಲ್ ಶಾಲೆಯು ಸ್ವಲ್ಪ ಉತ್ತಮಗೊಂಡಿದೆ. ಈ ವರ್ಷ ಹೊಸದಾಗಿ ಪರೀಕ್ಷೆಗೆ ಕೂತಿರುವ ಹುದಿಕೇರಿ ಶಾಲೆಯ ಫಲಿತಾಂಶ ಅತ್ಯಪ್ತಿಕರವಾಗಿದೆ. ಶೇಕಡ ೬೦ ರಂತೆ ಪಾಸಾಯಿದು ಎಂದೂ ಸಾಲದು. ಮುಂದಿನ ವರ್ಷಗಳಲ್ಲಿ ಇದು ಅಭಿವೃದ್ಧಿಗೊಳ್ಳಬೇಕಾಗಿದೆ. ಸೆಂಟ್ ಎನ್ಸ್ ಹೈಸ್ಕೂಲಿನ ಫಲಿತಾಂಶ ಶೇಕಡ ೪೦ರಷ್ಟಿದ್ದರೂ ಈ ಶಾಲೆ ಇನ್ನೂ ಅಭಿವೃದ್ಧಿಗೊಳ್ಳಬೇಕು.

ಈ ವರ್ಷದ ಫಲಿತಾಂಶದ ದುರಂತವೆಂದರೆ ಮಡಿಕೇರಿ ಮತ್ತು ವೀರಾಜಪೇಟೆ ಹೈಸ್ಕೂಲುಗಳು. ಈ ಎರಡು ಹೈಸ್ಕೂಲುಗಳೇ ಕೊಡಗಿನ ಹಿರಿಯ ಶಾಲೆಗಳು. ಈ ಶಾಲೆಗಳಿಗೆ ಸರಕಾರದ ಸಹಾಯ ಚೆನ್ನಾಗಿದೆ. ಅಧ್ಯಾಪಕ ವರ್ಗ, ಇತರ ಸಾಹಿತ್ಯಗಳು ಸರಿಯಾಗಿವೆ. ಆದ್ದರಿಂದ ಈ ಶಾಲೆಗಳು ಉಳಿದ ಹೈಸ್ಕೂಲುಗಳಿಗೆ ಆದರ್ಶವಾಗಿರಬೇಕಿತ್ತು. ಆದರೆ ಅವುಗಳ ಫಲಿತಾಂಶವು ಶೇಕಡ ೬೫ನ್ನು ಈ ವರ್ಷ ದಾಟಿರುವದಿಲ್ಲ ಮುಂದೆ ಹೀಗಾಗಬಾರದು. ಹಳೆಯ ಸಂಸ್ಥೆಗಳು ತಮ್ಮ ಗತ್ತು ಗಾರಿಕೆಯನ್ನು ಉಳಿಸಿಕೊಳ್ಳಬೇಕು.

ಈ ಸಂದರ್ಭದಲ್ಲಿ ಶಾಲೆಗಳ ಫಲಿತಾಂಶವು ಕೇವಲ ಅಧ್ಯಾಪಕರಿಂದಲೇ ಉತ್ತಮವಾಗುವದಿಲ್ಲವೆಂದು ಸಾರ್ವಜನಿಕರೂ ಪೋಷಕರೂ ತಿಳಿಯಬೇಕು. ತಮ್ಮ ಮಕ್ಕಳ ವಿದ್ಯಾಭ್ಯಾಸದ ಮಟ್ಟಿಗೆ ಸರ್ವರೂ ಮನೆಯಲ್ಲಿ ಎಚ್ಚರಿಕೆ ವಹಿಸಿ ಅಧ್ಯಾಪಕರೊಡನೆ ಸಹಕರಿಸಿದರೆ ಮಾತ್ರ ಪರಿಸ್ಥಿತಿ ಉತ್ತಮಗೊಳ್ಳುವದು. ಆದ್ದರಿಂದ ಕೊಡಗಿನ ವಿದ್ಯಾಪ್ರಗತಿಯು ಇನ್ನೂ ಸರ್ವತೋಮುಖ ಮುನ್ನಡೆಯುವಂತೆ ಸರಕಾರವೂ, ಸಾರ್ವಜನಿಕರೂ, ಅಧ್ಯಾಪಕ ವರ್ಗದವರೂ ಸಹಕರಿಸಿ ಕೆಲಸ ಮಾಡಲಿ.

ವರ್ತಮಾನ.

ಕೊಡಗಿನಲ್ಲಿರುವ ನೇಯಿಗೆಕಾರರು ತಮಗೆ ಸಂಬಂಧಿಸಿದ ವಿಷಯಗಳನ್ನು ಜಿಲ್ಲಾ ವಿದ್ಯಾಧಿಕಾರಿಗಳ ಕಚೇರಿಯಲ್ಲಿರುವ ಕೊಡಗಿನ ವೀವಿಂಗ್ ಇನ್ಸ್‌ಪ್ರಕ್ಟರರಿಂದ ತಿಳಿಯಬಹುದಾಗಿದೆ.

ಮದ್ರಾಸ್ ವಿಶ್ವವಿದ್ಯಾಲಯದ ಎಂ. ಎ. ಪರೀಕ್ಷೆಯಲ್ಲಿ ಶ್ರೀ ಪಂದಿಕುತ್ತಿರ ಮೂದಯ್ಯನವರೂ, ಬಿ. ಎ. ಪರೀಕ್ಷೆಯಲ್ಲಿ ಶ್ರೀಗಳಾದ ಅಜ್ಜಿಕುಟ್ಟಿರ ಐಯ್ಯಪ್ಪ, ತೀತಮಾಡ ತಿಮ್ಮಯ್ಯ, ಮತ್ತು ಬಿ. ಎಸ್. ದಾಸ್ ಇವರೂ, ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಪಳಿಯಂಡ ಕರುಂಬಯ್ಯ (ಪ್ರಥಮ ತರಗತಿಯಲ್ಲಿ) ಮತ್ತು ಕೊಡಂದೆರ ಕಾರ್ಯಪ್ಪನವರೂ ತೇರ್ಗಡೆಯಾಗಿರುವರು. ಮೈಸೂರು ವಿಶ್ವವಿದ್ಯಾಲಯದ ಬಿ ಎ ಪರೀಕ್ಷೆಯಲ್ಲಿ ಮಿಸ್. ಮನೆಯಪಂಡ ಜಿ. ಕಾಮಿ ಇವರು ತೇರ್ಗಡೆಯಾಗಿದ್ದಾರೆ.

ತಾ. ೨೦ರಲ್ಲಿ ಮಡಿಕೇರಿಯ ಹತ್ತಿರ ಸಿದ್ದಾಪುರ ರಸ್ತೆಯಲ್ಲಿ ಲಾರಿಯೊಂದು ಆಕಸ್ಮಿಕವಾಗಿ ಹಿಂತಿರುಗುತ್ತಿದ್ದ ಜನರ ಮೇಲೆ ಹಾಯ್ದು ನಾಲ್ಕು ಜನರಿಗೆ ಜಖಂ ಆಗಿದೆಯೆಂದೂ ಈ ಬಗ್ಗೆ ತನಿಖೆ ನಡೆಯುತ್ತಿದೆಯೆಂದೂ ವರ್ತಮಾನ.

ಅಂಡಮಾನಿನಲ್ಲಿರುವ ಕೊಡಗಿನವರೆಲ್ಲರೂ ಸೇರಿ ಅಲ್ಲಿನ ಫಾರೆಸ್ಟ್ ಕನ್ಸರ್‌ವೇಟರಾಗಿದ್ದ ಶ್ರೀವಾನ್ ಬಿದ್ದಂಡ ಚಂಗಪ್ಪನವರು ಉದ್ಯೋಗದಿಂದ ಜೂನ್ ತಾ. ೧೯ರಲ್ಲಿ ನಿವೃತ್ತರಾದುದರಿಂದ ಅವರಿಗೆ ಮೇ ತಾ. ೨೫ರಲ್ಲಿ ಒಂದು ಔತಣ ಕೂಟವನ್ನು ಪೋರ್ಟ್ ಬ್ಲೇರಿನಲ್ಲಿ ಕೊಟ್ಟು ಸತ್ಕರಿಸಿದರು.

ವೀರಾಜಪೇಟೆಯ ಇಂಡ್ರಸ್ಟ್ರೀಯಲ್ ಟ್ರೈನಿಂಗ್ ಇನ್ಸ್‌ಸ್ಟಿಟ್ಯೂಟಿನ ಕಬ್ಬಿಣ ಮತ್ತು ಮರಕೆಲಸದ ಉದ್ಯಮಗಳಲ್ಲಿ ಎಂಟೆಂಟು ಸ್ಥಾನಗಳು, ಮತ್ತು ಜನರಲ್ ಮೆಕಾನಿಕ್ ಉದ್ಯವದಲ್ಲಿ ಮೂರು ಸ್ಥಾನಗಳೂ ಖಾಲಿಯಿವೆ ಇಚ್ಛಿಸುವವರು ಮೇಲ್ಕಂಡ ಇನ್ಸ್‌ಟ್ಯೂಟ್‌ನಲ್ಲಾಗಲೀ, ಯೂ ಮಡಿಕೇರಿಯ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಾಗಲೀ, ಹೆಚ್ಚಿನ ವಿಷಯಗಳನ್ನರಿತುಕೊಂಡು ಒಡನೆ ತರಬೇತಿಗೆ ಸೇರಿಕೊಳ್ಳಬಹುದಾಗಿ ಈ ಮೂಲಕ ತಿಳಿಸಲ್ಪಟ್ಟಿದೆ.

ತಾ. ೨೦-೬-೫೬ರಲ್ಲಿ ಗಣಗೂರು ಗ್ರಾಮದ ವಯಸ್ಕರ ಶಿಕ್ಷಣಶಾಲೆಯಲ್ಲಿ ಗ್ರಾಮಕಲಾ ಹಬ್ಬವನ್ನು ಶ್ರೀ ಪಠೇಲ್ ಬಿ. ಬಸಪ್ಪನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ವಯಸ್ಕರಿಂದ ಕೋಲಾಟ, ಭಜನೆ, ಲಾವಣಿ, ಸುಗ್ಗಿ ಮುಂತಾದ ಕುಣಿತಗಳ ಏರ್ಪಾಡಿತ್ತು. ಆನೇಕ ಮಹನೀಯರು ಆಗಮಿಸಿದ್ದರು.

ಕೊಡಗು ಶಾಶನ ಸಭೆಯಲ್ಲಿ ಬಡ್ಜೆಟ್ ವೋಟಿಂಗ್ ತಾ. ೧೪-೭-೫೬ರಿಂದ ಪ್ರಾರಂಭವಾಗುವುದು.

ಈಗಿರುವ ಆ. ವಿದ್ಯಾಧಿಕಾರಿ ಮತ್ತು ಸುಪರ್‌ವೈಜರ ಹುದ್ದೆಯನ್ನು ತೆಗೆದುಹಾಕಿ ಅದರ ಬದಲು ಶ್ರೀ ಜಿ. ಎಸ್. ಕೇಶವಚಾರಿ ಮತ್ತು ಶ್ರೀ ದೇಯಂಡ ದೇವಯ್ಯನವರನ್ನು ಡೆಪ್ಯೂಟಿ ಇನ್ಸ್‌ಪೆಕ್ಟರುಗಳಾಗಿ ನೇಮಕ ಮಾಡಿರುವರು.

ಪೋಸ್ಟಲ್ ಡಿಪಾರ್ಟ್‌ಮೆಂಟಿಗೆ ಪೋಸ್ಟ್‌ಮೇನ್ ಮತ್ತು ಮೆಯಿಲ್ ಗಾರ್ಡ್ ಗಳಾಗಿ ಸೇರಲು ನಡೆಯುವ ಪರೀಕ್ಷೆಯು ಆಗಸ್ಟ್ ೩೧ಕ್ಕೆ ಜರುಗುವುದು. ಎಂಟನೇ ಕ್ಲಾಸು ಪಾಸಾಗಿ ಪಾಯ ೧೮ ರಿಂದ ೨೫ ವರ್ಷದ ಒಳಗಿರುವ ಕುತೂಹಲವುಳ್ಳಯುವಕರು ಕೂಡಲೆ ಹೆಚ್ಚಿನ ವಿಷಯಕ್ಕೆ ಸುಪರಿಂಟೆಂಡೆಂಟ್ ಆಫೀಸು, ಮೈಸೂರಿಗೆ ಬರೆದುಕೊಳ್ಳತಕ್ಕದ್ದು.

ಕಳೆದ ತಾ ೧೫ರಲ್ಲು ಪೊನ್ನಂಪೇಟೆ ಪ್ರೌಢ ಶಾಲಾ ಚುನಾವಣೆಗಳು ಆಧುನಿಕ ಮತದಾನ ಪದ್ಧತಿಯಂತೆ ನಡೆದು ಶಾಲೆಯ ವಿವಿಧಕ್ಷೇತ್ರಗಳಿಗೆ ಈ ಕೆಳಗಿನವರು ಚುನಾಯಿಸಲ್ಪಟ್ಟರು. ಶ್ರೀ. ಟಿ. ಕೆ. ಸೆಬ್ಬಯ್ಯ, ಶಾಲಾ ಕಾರ್ಯದರ್ಶಿ. ಯನ್. ಸಿ. ಬಿದ್ದಪ್ಪ, ಸಂಪಾದಕ ಬಾಲಭಾರತಿ, ಯಂ. ಯಂ. ಸುಬ್ಬಯ್ಯ, ಆಟೋಟಗಳ ಕ್ಯಾಪ್ಟನ್; ಕೆ ಡಿ ಬೆಳ್ಯಪ್ಪ ಹಾಕಿ ಕ್ಯಾಪ್ಟನ್, ಸಿ. ಯಂ. ಬೋಪಯ್ಯ, ಕ್ರಿಕೆಟ್ ಕ್ಯಾಪ್ಟನ್, ಯಂ. ಯನ್. ಪೂವಯ್ಯ, ವಾಲ್ಯು ಬಾಲ್ ಕ್ಯಾಪ್ಟನ್, ಸಿ ಎ ಮೂದಯ್ಯ, ಬ್ಯಾಡ್ ಮಿಂಟನ್ ಕ್ಯಾಪ್ಟನ್, ಬಿ. ಯಸ್. ಅಕ್ಕಮ್ಮ, ಟೆನ್ನಿಕಾಯಿಟ್ ಕ್ಯಾಪ್ಟನ್, ಸಿ. ಎ. ಗಂಗಮ್ಮ ಬ್ಯಾಡ್ ಮಿಂಟನ್ ಕ್ಯಾಪ್ಟನ್ ಮತ್ತು ಕೆ. ಎಂ. ಸುಬ್ಬಮ್ಮ, ರಿಂಗ್ ಟೆನಿಸ್ ಕ್ಯಾಪ್ಟನ್.

ರಾಯಲ್ ಸೀಮೆ ಸಹಾಯಕ ನಿಧಿ.

ಸೆಟ್ಲ್‌ಮೆಂಟ್ ಆಫೀಸು ಸಿಬ್ಬಂದಿಗಳಿಂದ	ರೂ. 75
ಸಂಪಾಜಿ ಸರ್ವೀಸ್ ಸೊಸೈಟಿ ಸಂಘ	,, 20
ಮಿಸೆಸ್ ಹಂಫ್ರೀಸ್	,, 20
ಶ್ರೀ ಮಂಗಲನಾಡು ಬ್ಯಾಂಕ್	,, 20
ಶ್ರೀ ಪಿ. ಕೆ. ಶಿವಪ್ಪಯ್ಯ	,, 15
ಹುದಿಕೇರಿ ವರ್ಕಿಂಗ್ ಸಂಘ	,, 10
ಹುದಿಕೇರಿ ಸಹಕಾರ ಬ್ಯಾಂಕ್	,, 10
ಶ್ರೀ ಮಂಗಲ ವರ್ಕಿಂಗ್ ಸಂಘ	,, 10
ಶ್ರೀ ಕೆ ಎಸ್. ಅಪ್ಪಚ್ಚು	,, 10
ಈ ವರೆಗೆ ಪ್ರಕಟಿಸದ ಒಟ್ಟು ಮೊಬಲಗು	,, 822
ಜುಮ್ಲ	ರೂ. 1012

೧೦ ರೂ. ಬಹುಮಾನ.

ನನ್ನ ಬಾಪ್ಪು ಸುಮಾರು ೩೫ ಅಡಿ ಎತ್ತರದ ಕುಡಿಕೆ ಕೊಂಬಿನ ಕರಿ ಎಮ್ಮೆ ಒಂದು ಮತ್ತು ಅದೇ ಎತ್ತರದ ಚೆಳ್ಳೆಕೊಂಬಿನ ಬಳೀ ಎಮ್ಮೆ ಒಂದು ಮತ್ತು ಬಿಳಿ ವರ್ಣದ ಎಮ್ಮೆಕರ ಹೀಗೆ ಮೂರು ರಾಸುಗಳು ವೀರಾಜಪೇಟೆ ಕದನೂರು ಗ್ರಾಮದಿಂದ ತಾ. ೩೦-೫-೫೬ರಿಂದ ಪರಾರಿಯಾಗಿವೆ. ಇವುಗಳ ಪತ್ತೆಹಚ್ಚಿಕೊಟ್ಟವರಿಗೆ ರೂ. ೧೦|– ಬಹುಮಾನ ಕೊಡಲಾಗುವದು.

ಪಿ. ಎ. ಕಾರ್ಯಪ್ಪ,
ಕದನೂರು ಗ್ರಾಮ,
ವೀರಾಜಪೇಟೆ.

ಓದುಗರ ಓಲೆ.

ಈ ದುರಭ್ಯಾಸ ನಿಲ್ಲಲಿ.

ಸಿನಿಮಾ ಮಂದಿರಗಳಲ್ಲಿ ಹೊಗೆ ಬತ್ತಿ ಸೇದಕೂಡದೆಂದು ನೂಲೀಕರು ನೋಟೀಸು ಬೋರ್ಡು ಹಾಕಿರುವದಲ್ಲದೆ ಒಂದು ಸ್ಲೈಡ್ ಸಹ ತಯಾರು ಮಾಡಿ ಪ್ರತಿ ನಿತ್ಯವೂ ತೋರಿಸುತ್ತಾ ಇದ್ದಾರೆ. ಆದಾಗ್ಯೂ ಕೂಡ ಕೆಲವು ಜನಗಳು ಈ ನಿಬಂಧನೆಗಳನ್ನು ತಿರಸ್ಕರಿಸುವದಲ್ಲದೆ ಸಿನಿಮಾ ಮಂದಿರಕ್ಕೆ ಬರುವ ಜನರಿಗೆ ಹೊಗೆ ಬತ್ತಿ ಸೇದಿ ತೊಂದರೆ ಕೊಡುತ್ತಾರೆ. ಇದು ಸಹಿಸಲು ಬಹಳ ಅಸಾಧ್ಯವಾಗಿದೆ ಇದರಲ್ಲಿ ಮುಖ್ಯವಾಗಿ ದೊಡ್ಡ ಮನುಷ್ಯರು ಅನ್ನಿಸಿಕೊಂಡು ಹ್ಯಾಟು ಕೂಟು ಹಾಕಿಕೊಂಡು ಇರುವವರು ಮುಖ್ಯ ಅಪರಾಧಿಗಳು. ಇದರ ವಿಷಯದಲ್ಲಿ ಕಾನೂನು ಇಲ್ಲವೆಂದು ತಿಳಿದು ಈ ರೀತಿ ಮಾಡುವದಾಗಿದೆ.

ವಾಚಕರಿಗೆ ಗೊತ್ತಿರುವಂತೆ ಇತರ ಪ್ರಾಂತ್ಯಗಳಲ್ಲಿ ಕಾನೂನು ಮಾಡಿ ಜಾರಿಗೆ ತಂದಿರುತ್ತಾರೆ. ನೊನ್ನೆ ತಾನೆ ಮೈಸೂರು ಶಾಸನ ಸಭೆಯಲ್ಲಿ ಒಂದು ಮಸೂದೆ ತಂದಿರುತ್ತಾರೆ. ಆದ್ದರಿಂದ ದಯವಿಟ್ಟು ನಮ್ಮ ಮಂತ್ರಿಗಳ ಸದ್ಯ ಕಾನೂನನ್ನು ಕೂಡಲೇ ಕೊಡಗು ಶಾಸನಸಭೆಯಲ್ಲಿ ಪಾಸು ಮಾಡಿ ಸಿನಿಮಾ ಮಂದಿರಕ್ಕೆ ಹೋಗುವ ಜನರಿಗೆ ಇದರ ಬಾಧೆಯನ್ನ ತಪ್ಪಿಸುವರಾಗಿ ನೆಟ್ಟುತ್ತೇನೆ.

ಸಿನಿಮಾ ಪ್ರಿಯಾಕ.

॥ ದುರ್ಬೀನು ನೋಟ ॥

— ನೋಡಿದವರು:— 'ರಸಿಕ' —

'ಚ' ನಾವಣೆ ಮುಗಿದು ಜನತಾ ಸರಕಾರವಾಗಿದೆ. ಇನ್ನಾದರೂ ಕೊಡಗಿನ ಎರಡು ರಾಜಕೀಯ ಪಕ್ಷಗಳು ಒಂದಾಗಲು ಯತ್ನಿಸಬಾರದೇಕೆ? ಕಣ್ಣಿಗೆ ದುರ್ಬೀನು ಇಟ್ಟು ಕೈಗೆ ಬಂದಂತೆ ಬರೆಯುವ ನೀವು ಈ ರೀತಿಯ ಒಡಕು ಸಂಧಾನಕ್ಕೆ ಯತ್ನಿಸಬಾರದೇ' ಎಂದು ವಾಚಕರೊಬ್ಬರು ಬರೆದಿದ್ದಾರೆ. ಕೊಡಗಿನ ರಾಜಕೀಯ ಪಕ್ಷಗಳನ್ನು ಒಂದುಗೂಡಿಸುವ ಸಂಧಾನ ಸಾಧಕನ ಯೋಗ್ಯತೆ ನನಗೆ ಇಂದು ನೇಳೆ ಇದ್ದರೂ ಕೂಡ ಸಂಧಾನ ಪ್ರಯತ್ನ ಮಾಡುವಷ್ಟು ಹುಚ್ಚನು ನಾನಲ್ಲ. ಏಕೆಂದರೆ ಶಾಂತಿ ಕಾಲದ ಸಂಧಾನ ಸಾಧಕರಿಗೂ ಮಳೆಗಾಲದ ಎಣ್ಣೀರಿಗೂ ಇಂದೇ ಬೆಲ!

* * *

ಸಂವಾಜೆ ಕಡೆಯಲ್ಲಿ ಬೀಜದ ಬತ್ತವನ್ನು ಮುಡಿಕಟ್ಟು ಇಟ್ಟರಂತೆ. ಆದರೆ ಆಂಥಾ ಮುಡಿಕಟ್ಟುಗಳಲ್ಲಿ ಸಾರಾಯಿ ಕಪ್ಪು ಇದ್ದದ್ದು ಮೊನ್ನೆ ಪತ್ತೆಯಾಗಿದೆ! ಅಂಚೆ ಜವಾನನಿಗೆ ಲಕೋಟೆ ಕಾಗದದ ಸಂಗತಿ ತಿಳಿಯೆದು. ಅದರಂತೆ ಎಕ್ಸೈಸ್ ಇನ್ಸ್‌ಪೆಕ್ಟರಿಗೂ ತಿಳಿಯದಿರುವದೆಂದು ಭಾವಿಸಿದಂತಿದೆ! ಆದರೆ ಅತ್ತ ಬಡಿಪ್ಪಕೊಳ್ಳಿವಾಗಲೂ ಅಭಿನಂದಿಸುವಾಗಲೂ ಹಣಕ್ಕೆ ಕೈ ಹೋಗುವಂತೆ ಸಮಾಜ ಸೇವೆಯಲ್ಲೂ ಅಧಿಕಾರ ಚಾಲನೆಯಲ್ಲೂ ಹಣಕ್ಕೆ ಕೈ ಹೋಗಬಾರದು. ಹಾಗಿದ್ದರೆ ಮಾತ್ರ ಕಲಸಕ್ಕೆ ಗೌರವ.

* * *

ಗುಟ್ಟಿನವ ಗುಣುಗುಣು ಮಾತಾಡಬೇಕು. ಆದರೆ ಸಿಟ್ಟಿನವ ಗುಡುಗುಡಿಸಬೇಕು. ಇದು ಸಂಹ್ಯದಾಯ. ಗುಟ್ಟು ಸಿಟ್ಟುಗಳೆರಡೂ ಸೇರಿದರೆ ಮನುಷ್ಯ ಗುಡುಗುಡಿಸಿ ನಂತರ ಸಮಾಧಾನದಿಂದ ಕ್ಷಮೆಬೇಡುತ್ತಾನೆ. ಮೊನ್ನೆ ಮರಣ್ಯಾಪಾಡಲ್ಲಿ ಅಧಿಕಾರಿಯೊಬ್ಬರು ಗುಡುಗುಡಿಸಿದರು. ನಂತರ ಕ್ಷಮೆಬೇಡಿದರಂತೆ! ಮನುಷ್ಯ ಸಮಂಕ್ಯಜೆ ಜಾರಿಕೊಳ್ಳಬಹುದು. ಆದರೆ ಸಾವಿಗಂಜಿ ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲ. ಆದರಂತೆ ಗಲಾಟೆ ಮಾಡಿ ಹರಾಜು ನಿಲ್ಲಿಸಿ ಓಡಿಹೋಗಬಹುದಾದರೂ ಜನರ ಬಾಯಿಯಿಂದ ತಪ್ಪಿಸಿಕೊಳ್ಳುವದು ಸಾಧ್ಯವಿಲ್ಲ.

* * *

'ಅಡಿಗೆ ಮನೆಯ ಹೊಗೆ ಆಸ್ಥಾನದವರೆಗೂ ವ್ಯಾಪಿಸಬಾರದು. ಸಂಬಂಧ ಬೊಳಗಿನ ಹಗೆ ಸಾರ್ವಜನಿಕ ಕಾರ್ಯದಲ್ಲೂ ತೋರಿ ಬರಬಾರದು' ಎಂಬ ಮಾತಿನ ಅರ್ಥವನ್ನು ಅನೇಕರು ಅರಿಯಬೇಕು. ಕೊಡಗಿನಲ್ಲಿ ಈ ಮಾತಿನ ಅರ್ಥ ತಿಳಿದವರು ಅತಿ ವಿರಳ. ಮನೆಯಲ್ಲಿ ಭಿನ್ನಾಭಿಪ್ರಾಯವಿದ್ದಲೆ ರಾಜಕೀಯದಲ್ಲೂ ಭಿನ್ನಾಭಿಪ್ರಾಯವೆ! ರಾಜಕೀಯದಲ್ಲಿ ಭಿನ್ನಾಭಿಪ್ರಾಯವಿದ್ದರೆ ಪರಸ್ಪರ ವಿರೋಧ ತಪ್ಪಿದ್ದಲ್ಲ. ಇದರಿಂದ ಬಂಧುತನ ಸ್ನೇಹಗಳಿಗೇ ಸಂಚಕಾರ!

* * *

'ದುರ್ಬೀನು ನೋಡುವ ನಿನ್ನ ಕೆಲಸವನ್ನು ನಾನು ಮೆಚ್ಚುವದಿಲ್ಲ. ಆದರೂ ನಿನಗೆ ಹಲವರು ಗೌರವ ಕೊಡುತ್ತಾರೆಂಬುದು ನನಗೆ ಗೊತ್ತಾಗಿದೆ. ಪತ್ರಿಕೆ ಬಂದೊಡನೆ 'ದುರ್ಬೀನು ನೋಟ'ವನ್ನು ಪೂರ್ತ ಓದುವವರಿದ್ದಾರೆ. ಆ ಲೇಖನ ಇಲ್ಲದಿದ್ದರೆ ಪತ್ರಿಕೆಯನ್ನು ತೆಗೆದು ಹಾಕುವವರಿದ್ದಾರೆ ಇದೇಕೆ ಹೀಗೆ ಮಾಡತ್ತಾರೆ?' ಎಂದೊಬ್ಬರು ಕೇಳುತ್ತಾರೆ. ದುರ್ಬೀನು ನೋಡಿ ಬರೆಯುವ ನನ್ನ ಕೆಲಸಕ್ಕೆಂಥಾ ಉಪಯುಕ್ತವೂ ಆದರ್ಶದಾಯಕವೂ ಆದ ಕೆಲಸ ಮಾಡುವವರು. ಹಲವರಿದ್ದಾರೆಂದು ನನಗೆ ಗೊತ್ತಿದೆ. ಆದರೆ ಆತಿ ತೆಗೆಯುವ ದೀಪಕ್ಕಿರುವ ಗೌರವ ಅಡುಗೆಯ ಬೆಂಕಿಗಿಲ್ಲ. ಅದರಂತೆ ನನ್ನ ಪರೋಪದೇಶ ಪಾಂಡಿತ್ಯಕ್ಕಿರುವ ಮಾನ್ಯತೆ ಬೇರೆ ಪರಿಶ್ರಮಿಗಿಲ್ಲ!

* * *

'.....ನ್ನು ಮುಂದಾಳೆಂದು ನಾನು ಹಿಂಬಾಲಿಸಿದೆ. ಅವರಿಗಾಗಿ ದುಡಿದೆ. ಕಳೆದ ಚುನಾವಣೆಯಲ್ಲಿ ಹೃತ್ಪೂರ್ವಕ ಬೆಂಬಲವಿತ್ತೆ. ಈಗ ಅವರು ಅಧಿಕಾರಕ್ಕೇರಿದ್ದಾರೆ. ಆದರೆ ಅವರು ಹಿಂದಿನಂತೆ ಇಂದಿಲ್ಲ. ಅಧಿಕಾರವು ನಿಜವಾಗಿಯೂ ಮನುಷ್ಯನನ್ನು ಹಾಳುಮಾಡುತ್ತದೆಂಬುದಕ್ಕೆ ಇದೊಂದು ನಿದರ್ಶನ' ಎಂದೊಬ್ಬರು ಬರೆದಿದ್ದಾರೆ. ಸೂರ್ಯನನು ಸ್ಕಾರ ಮಾಡುವದು ದೇಹದ ಆರೋಗ್ಯಕ್ಕೆ ವಿನಾ ಸೂರ್ಯದೇವನ ವೆಚ್ಚಿಗೆಗಲ್ಲ. ಅದರಂತೆ ಮುಂದಾಳುಗಳ ಆನುಯಾಯಿತ್ವ ಮನೋಶುದ್ಧಿಗೆ ಹೊರತು ಅವರ ಅನುಗ್ರಹವಾಗಬೇಕೆಂದಲ್ಲವೆಂದು ಅವರಿಗೆ ಹೇಳಬೇಕಾಗುತ್ತದೆ!

ಕೊಡಗಿನ ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ.

ಕಳೆದ ಸ್ಕೂಲ್ ಫೈನಲ್ ಪರೀಕ್ಷೆಗೆ ಕೊಡಗಿನ ವಿವಿಧ ಹೈಸ್ಕೂಲುಗಳಿಂದ ಕುಳಿತ ವಿದ್ಯಾರ್ಥಿಗಳಲ್ಲಿ ಈ ಕೆಳಗಿನವರು ತೇರ್ಗಡೆಯಾಗಿದ್ದಾರೆ. ಪರೀಕ್ಷೆಗೆ ಕೂತ ೨೬೭ ವಿದ್ಯಾರ್ಥಿಗಳಲ್ಲಿ ೧೯೯ ಜನರು ಅಂದರೆ ಶೇಕಡ ೫೦ ರಂತೆ ಪಾಸಾಗಿದ್ದಾರೆ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲು.

ಶ್ರೀಗಳಾದ ಎ. ಜಿ. ಭಾಸ್ಕರ, ಚಿದ್ದಂಡ ಸುಬ್ಬಯ್ಯ, ಅಪ್ಪನೆರವಂಡ ಕಾಳಪ್ಪ, ಮೂರೀರ ಚಿಟ್ಟಮ್ಮ, ಮುಕ್ಕಾಟಿರ ಅಣ್ಣಯ್ಯ, ಅಲ್ಲಾರಂಡ ಧನಂಜಪ್ಪ, ಎ ಸಿ. ಸೋಮಯ್ಯ, ಕೇಳಪಂಡ ಗಣಪತಿ, ಕೆ. ಎಸ್. ಗಣಪತಿ, ಎಂ ಎಂ ರಾಮು ಮೂರ್ತಿ, ಎಂ.ಎ. ಅಮ್ದುಲ್‌ಗಫ್ಫಾರ್, ಕೋದಾಂಡ ಅಪ್ಪಯ್ಯ, ಎಸ್. ಭಾಗ್ಯಲಕ್ಷ್ಮಿ, ಎಸ್.ಎಸ್.ಗೋಪಾಲಕೃಷ್ಣ, ಮೊಂಡಂಡ ಗೌರಮ್ಮ, ಬಲ್ಯಂಡ ಕಾಳಪ್ಪ, ಕೆ.ಎಂ.ಕೇಶವ, ಪೂಳೇಟಿರ ಮೊಚಯ್ಯ, ಮಹಮ್ಮದ್ ಉಸ್ಮಾನ್, ಮಂಜಾಂದಿರ ಮುತ್ತಣ್ಣ, ಕುಪ್ಪಂಡ ಪ್ರೇಮನಾಥ್, ತೆನ್ನಿರ ಸೋಮಯ್ಯ, ಮೊಂಡಂಡ ಸುಬ್ಬಯ್ಯ, ಮೇಲಿಯಂಡ ಗಣಪತಿ, ಕೋದಾಂಡ ಕರುಂಬಯ್ಯ, ಸಿ. ಡಿ. ಕುಂದರ್, ಕಂಬಿಯಂಡ ಅಪ್ಪಯ್ಯ, ಪಿ ಎಸ್. ಮೊದಪ್ಪ, ಸಿ. ಎಸ್. ಮೊದಪ್ಪ, ಮೂಚಿಮಾಡ ಭೀಮಯ್ಯ, ಬಿ ಬಿ. ಮಂದಪ್ಪ, ಕಟ್ಟೀರ ಸುಬ್ಬಯ್ಯ, ಬಿ. ಎ. ಪಂಕಜ, ವಿ. ಎನ್. ರಕ್ಮಿಣಿ, ಚಿಟ್ರಂಡ ಸೋಮಣ್ಣ, ಪೂಳೇಟಿರ ಪೂಣಚ್ಚ ಮತ್ತ ಚೆಂಬಾರಂಡ ಮೂಚಯ್ಯ ಇವರುಗಳು. ಪರೀಕ್ಷೆಗೆ ಕೂತ ೬೨ ವಿದ್ಯಾರ್ಥಿಗಳಲ್ಲಿ ೩೭ ಜನ. ಅಂದರೆ ಶೇಕಡ ೬೦ ರಂತೆ.

ಸೆಂಟ್ ಮೈಕೇಲ್ಸ್ ಹೈಸ್ಕೂಲು

ಶ್ರೀಗಳಾದ ಕೆ. ಸಿ. ಪೂವಯ್ಯ, ಬಲ್ಲಚಂಡ ಬೊಳ್ಳಮ್ಮ, ಜಿ. ಕೆ. ವೈತಿಲಿ, ಎಂ. ಎಂ. ಅಪ್ಪಯ್ಯ, ಕೆ. ಎಂ. ಬಸಪ್ಪ, ಎ. ಪಿ. ದೇವಯ್ಯ, ಎಂ. ಜೆ. ಚಿಂಗಪ್ಪ, ಕೆ. ಎಸ್. ಪೊನ್ನಪ್ಪ, ಕೆ. ಬಿ. ರಾಘವಯ್ಯ, ಸಿ. ಎ. ರಘುವೀರ, ಎಂ. ಸಿ ಉತ್ತಯ್ಯ ಮತ್ತು ಕೆ. ಎ ಪೆನ್ಮಯ್ಯ. ಇವರುಗಳ, ಎರಡು ವಿದ್ಯಾರ್ಥಿಗಳ ಪುಸ್ತಕ ಬಂದಿರುವದಿಲ್ಲ. ಪರೀಕ್ಷೆಗೆ ಕೂಡ ೨೫ ರಲ್ಲಿ ೧೨, ಶೇಕಡ ೪೮ ರಂತೆ.

ನಾಪೋಕ್ಲು ಹೈಸ್ಕೂಲು.

ಶ್ರೀಗಳಾದ ಬಿ. ಡಿ. ಗಂಗಮ್ಮ, ಸಿ. ಎಸ್. ಅಪ್ಪಚ್ಚ, ಕೆ. ಎಂ ಅಪ್ಪಯ್ಯ, ಎ. ಎಂ. ಬೆಳ್ಯಪ್ಪ, ಎ. ಟಿ. ಗಣಪತಿ, ಜೆ ಎ. ಗೋಪಾಲ್, ಕೆ. ಎಂ. ಪೊನ್ನಪ್ಪ, ಎಂ. ಸಿ. ಸುಬ್ಬಯ್ಯ, ಎಂ. ಎಸ್. ಗಣಪತಿ, ಎಂ. ಸಿ. ಸೋಮಚ್ಚಿ, ಜಿ ಎನ್. ಅಪ್ಪಯ್ಯ, ಪಿ. ಎನ್. ಅಪ್ಪಯ್ಯ, ಕೆ. ಬಿ ಅಪ್ಪಣ್ಣ, ಕೆ. ಕೆ. ಸಾವಿತ್ರಿ, ಕೆ. ಎ. ಬೆಳ್ಯಪ್ಪ, ಕೆ. ಎ ಉತ್ತಪ್ಪ, ಬಿ. ಕೆ. ಅಪ್ಪಣ್ಣ, ಬಿ. ಎಂ. ಡಲಿ, ಟಿ. ಆರ್. ಆನಂದ, ಐ. ಎನ್. ಮೊದಯ್ಯ, ಎಂ. ಡಿ. ಅಪ್ಪಯ್ಯ, ಕೆ. ಎ ಪೊನ್ನಪ್ಪ, ಬಿ. ಎಂ ತಿಮ್ಮಯ್ಯ, ಪಿ. ಟಿ, ಕಾವೇರಪ್ಪ, ಸಿ. ಸಿ. ಉತ್ತಪ್ಪ, ಎಂ. ಸಿ. ಈರಪ್ಪ ಮತ್ತು ಕೆ ಎ. ತಮ್ಮಯ್ಯ ಇವರುಗಳು ಪರೀಕ್ಷೆಗೆ ಕೂತ ೪೪ ವಿದ್ಯಾರ್ಥಿಗಳಲ್ಲಿ ೨೭ ಅಂದರೆ ಶೇಕಡ ೬೧ ರಂತೆ.

ವೀರಾಜಪೇಟೆ ಹೈಸ್ಕೂಲು.

ಶ್ರೀಗಳಾದ ಫಕ್ರುದ್ದೀನ್ ಪೋಕರ್, ಎಂ. ಬಿ. ಗಂಗಮ್ಮ, ಬಿ. ಜಿ. ಸಂಜಪ್ಪ, ಎಚ್.ಸಿ. ಗೋಪಾಲ, ಸಿ ಟಿ. ಮುತ್ತಣ್ಣ, ಎ.ಎಸ್. ಗೋಪಾಲಕೃಷ್ಣನ್, ರಾಮೇಶರಾವ್, ಪಿ.ಸಿ. ಅಚ್ಚಯ್ಯ, ಪಿ.ಯು. ವೇದಪ್ಪ, ಪಿ. ಪಿ. ಮೊಚಯ್ಯ, ಪಿ. ಎನ್. ಮುತ್ತಮ್ಮ, ಪಿ ಕಟ್ಟಪ್ಪ, ಕೆ. ಬಿ. ಅಪ್ಪಚ್ಚು, ಎಂ. ಬಿ. ಪೂಣಚ್ಚ, ಬಿ. ಈರಪ್ಪ, ಕೆ. ಚಂಗಪ್ಪ, ಕೆ. ಎ. ಐಯ್ಯಪ್ಪ, ಸಿ. ಎಂ. ಭೀಮಯ್ಯ, ಎಸ್ ಜಿ. ಭಗವಾನ್, ಎಂ. ಎಂ. ಬೆಳ್ಯಪ್ಪ, ಎಂ. ಪಿ. ಬೊಳ್ಳಮ್ಮ, ಪಿ. ಡಿ. ಚಿಟ್ಟಿಚ್ಚ, ಸಿ. ಜಿ ದೇವಯ್ಯ, ಸಿ. ಎ. ಆರ್ ಸಿದ್ಧಮಲ್ಲಪ್ಪ, ಪಿ. ಸುಬ್ಬಯ್ಯ, ಕೆ. ಸಿ. ಶಾಂತಿ, ಪಿ. ವೈ. ಸಾದಲಿ, ಬಿ. ಎಸ್. ಕುಶಾಲಪ್ಪ, ಎಂ. ಪಿ. ಇಸ್ಮೈಲ್. ಕೆ. ಪಾರ್ವತಿ, ಐ ಡಿ ನಂಜಪ್ಪ, ಪಿ. ಸಿ. ಸುಬ್ಬಯ್ಯ, ಎಸ್. ಸದಾಶಿವರಾವ್, ಕೆ. ಜಿ. ನಾರಾಯಣ, ಪಿ. ಬಿ ಕಾಳಪ್ಪ, ಕೆ. ಎಂ. ರಾಧ ಮತ್ತು ಎನ್. ಯು. ತಮ್ಮಯ್ಯ ಇವರುಗಳು. ೯೦ರಲ್ಲಿ ೩೭ ಶೇಕಡ ೪೧ ರಂತೆ.

ಹುದಿಕೇರಿ ಹೈಸ್ಕೂಲು

ಶ್ರೀಗಳಾದ ಮಚ್ಚಾಮಾಡ ಭೀಮಯ್ಯ, ಕೊಟ್ಟಂಗಡ ಮುತ್ತಣ್ಣ, ಅಜ್ಜಿಕುಟ್ಟಿರ ಮುತ್ತಣ್ಣ, ಕೇಚೆಟ್ಟಿರ ಕರುಂಬಯ್ಯ, ಕೆ. ಪಿ. ಸೀತಾರಾಮ ಮತ್ತು ಬೊಜ್ಜಂಗಡ ಸೋಮಣ್ಣ ಇವರುಗಳು ಪರೀಕ್ಷೆಗೆ ಕೂತ ೩೦ ವಿದ್ಯಾರ್ಥಿಗಳಲ್ಲಿ ೬. ಶೇಕಡ ೨೦ರಂತೆ.

ಪೊನ್ನಂಪೇಟೆ ಹೈಸ್ಕೂಲು

ಶ್ರೀಗಳಾದ ಮಲಚಿರ ಕರುಂಬಯ್ಯ, ಚೆಪ್ಪುಡೀರ ಕಾರ್ಯಪ್ಪ, ಪೋಡಮಾಡ ಚಿಣಪ್ಪ, ಮನೆಯಪಂಡ ಬಿದ್ದಪ್ಪ, ಮನೆಯಪಂಡ ಅಚ್ಚಪ್ಪ, ಚೇಮಿರ ಅಚ್ಚಪ್ಪ ಬಿಟ್ಟಿಯಂಡ ಮುತ್ತಣ್ಣ, ಬಿ. ಆರ್. ಪದ್ಮನಾಭರಾವ್, ಮುಕ್ಕಾಟಿರ ಸೋಮಯ್ಯ, ಮುಕ್ಕಾಟಿರ ಮುತ್ತಣ್ಣ, ತೀತಿಮಾಡ ಕುಶಾಲಪ್ಪ, ಚೋಟಣಮಾಡ ಅಪ್ಪಾಜಿ, ಕರ್ತಮಾಡ ಮುದ್ದಪ್ಪ, ಜಮ್ಮಾಡ ಮೊಚಯ್ಯ, ಮೂಹಂಗಡ ಗಣಪತಿ, ಮನೆಯಪಂಡ ಬಾಲಕೃಷ್ಣ, ಕಡೇಮಾಡ ಕರುಂಬಯ್ಯ, ಕಾಕಮಾಡ ಭೀಮಯ್ಯ, ಐಚೆಟ್ಟಿರ ಕಟ್ಟಯ್ಯ, ಪುಚ್ಚಿಮಾಡ ದೇವಯ್ಯ, ಕಾಳಮಾಡ ಮುತ್ತಪ್ಪ, ಸುಳ್ಳಿಮಾಡ ಪೂಣಚ್ಚ, ಮುಂಡ ಮಾಡ ದೇವಮ್ಮ ಬಿ. ಆರ್. ಸುಶೀಲ, ಅದೇಂಗಡ ಅವ್ವಮ್ಮ, ಅಪ್ಪಂಡೆರಂಡ ಸೋಮಕ್ಕ, ಚೇಂದ್ರಿಮಾಡ ಅಯ್ಯಪ್ಪ, ಪೆನ್ಮಂಡ ಕೆ. ಅಯ್ಯಮ್ಮ, ಎಸ್. ಎಂ. ಶಿವನಂಜಪ್ಪ, ಎ. ಜೆ. ಪಂಮೇಶ್ವರ, ಕೆ. ಆರ್. ವಸಂತಿ, ಎಸ್. ಎ ಸೋಮೇಶ ಇವರುಗಳು. ಪರೀಕ್ಷೆಗೆ ಕೂತ ೫೦ ರಲ್ಲಿ ೨೩ ಶೇಕಡ ೪೪ ರಂತೆ.

ಇಲಿಗಳನ್ನು ಬಡೆದು ಹಿಡ್ದಿನ ಹೊಟ್ಟೆಗೆ ಹಾಕುವ ನೀತಿ.

ತಾರೀಕ ೩೦-೫-೫೫ರ 'ಕೊಡಗು' ಪತ್ರಿಕೆಯಲ್ಲಿ ಅವರ ಸುದ್ದಿಗಾರರೊಬ್ಬರು ಫಾರೆಸ್ಟ್ ಇಲಾಖೆಯು ಮರಕಂಟ್ರಾಕ್ಟ ಕೊಡುವ ಅಹಿತ ವ್ಯವಸ್ಥೆಯನ್ನು ಕುರಿತು ಬರೆದಿದ್ದರು. ಆ ಲೇಖನದಲ್ಲಿ ಕೊಡಗು ಫಾರೆಸ್ಟ್ ಇಲಾಖೆಯವರು ಟೆಂಡರು ಹಾಕಿದ ಇತರರನ್ನು ಕಡೆಗಣಿಸಿ ಒಬ್ಬ ದೊಡ್ಡ ಕಂಟ್ರಾಕ್ಟರಿಗೆ ಎಂದೂ ಇಲ್ಲದ ಘನ ಆಡಿಗೆ ರೂ. ೧-೧-೬ರ ದರದಲ್ಲಿ ಕಂಟ್ರಾಕ್ಟು ಕೊಟ್ಟ ಕಾರಣ ಕೊಡಗು ಸರಕಾರದ ಬೊಕ್ಕಸಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ನಷ್ಟವಾಗುವದೆಂದು ಬರೆದಿದ್ದರಂತೆ. ಅವರು ಬರೆದ ಲೇಖನವು ಪೂರಾ ಸತ್ಯವಾಡುದೆಂಬುದಕ್ಕೆ ಈ ಕೆಳಗಿನ ಒಂದು ನಿದರ್ಶನ ಸಾಕು.

ಫಾರೆಸ್ಟ್ ಇಲಾಖೆಯು ಬೆನ್ನುತಟ್ಟುವ ಹಾಗೆ ಮಂತ್ರಿಯವರ ಅಭಿಪ್ರಾಯವನ್ನು ಮೊನ್ನೆ 'ಕೊಡಗು' ಪತ್ರಿಕೆಯಲ್ಲಿ ಓದಿದೆನು. ಚಿಕ್ಕ ಕಂಟ್ರಾಕ್ಟರರಿಗೆ ಕಂಟ್ರಾಕ್ಟು ಕೊಟ್ಟರೆ ಅವರು ಸರಿಯಾಗಿ ಟೆಂಬರು ಸಕಾಲದಲ್ಲಿ ಸಾಗಿಸದೆ ಸರಕಾರಕ್ಕೆ ವಿಪರೀತ ನಷ್ಟವಾಗುತ್ತದೆಂದೂ ಆದ್ದರಿಂದ ದೊಡ್ಡ ಕಂಟ್ರಾಕ್ಟರರಿಗೆ ಕೊಟ್ಟು ಆ ವರ್ಷ ಕಡಿದ ಟೆಂಬರು ಆದೇ ವರ್ಷ ಸಾಗಿಸಲ್ಪಡುವಂತೆ ನೋಡುವದೇ ತನ್ಮ ಗುರಿಯೆಂದೂ ಅವರು ಹೇಳಿದುದಾಗಿ ವರದಿಯಾಗಿದೆ.

ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಟೆಂಡರುದಾರರನ್ನು ಆಹ್ವಾನಿಸಿ ಕನಿಷ್ಟದರದಲ್ಲಿ ಮರಸಾಗಿಸುವ ಏರ್ಪಾಡು ಮಾಡಿ ಸರಕಾರಕ್ಕೆ ಹಿತವಾಗುವ ಏರ್ಪಾಡು ಮಾಡುವದೇ ಪತ್ರಿಕೆಗಳಲ್ಲಿ ಟೆಂಡರುದಾರ್ಥನ್ನು ಆವ್ವಾನಿಸುವ ಗುರಿಯಾಗಿದೆ. ಟೆಂಡರುದಾರರು ಕಂಟ್ರಾಕ್ಟಿಗಾಗಿ ವಂದಿ ಬಂದಾಗ ಯಾರಾದರೊಬ್ಬರಿಗೆ ತನ್ಮ ಇಷ್ಟದಂತೆ ಹೆಚ್ಚಿನ ದರಕ್ಕೆ ಕಂಟ್ರಾಕ್ಟು ಕೊಡುವದಾದರೆ ಪತ್ರಿಕೆಗಳಲ್ಲಿ ಟೆಂಡರು ನೋಟೀಸು ಹಾಕುವದರ ಅರ್ಥವೇನ ? ಚಿಕ್ಕ ಕಂಟ್ರಾಕ್ಟರು ಕಂಟ್ರಾಕ್ಟ ತೆಗೆದುಕೊಂಡರೆ ನಿಶ್ಚಿತ ಸಮಯದಲ್ಲಿ ಟೆಂಬರು ಸಾಗಿಸವಂತೆ ನೋಡಲು ಯಾವುದೇ ಶರತು ವಿಧಾನಗಳಿಲ್ಲವೇ ?

ಸರಕಾರವು ಈಗ ನಿಶ್ಚಯಿಸಿರುವ ದೊಡ್ಡ ಕಂಟ್ರಾಕ್ಟರನ್ನುವ ವೈಸೂರಿನ ಬೋರಯ್ಯ ಬಸವಯ್ಯ ಅಂಡ್ ಸನ್ಸ್ ಇವರೂ ಕೂಡ ತಾವೇ ಮರ ಸಾಗಿಸದೆ ತಮ್ಮ ಕೈಕೆಳಗೆ ಚಿಕ್ಕ ಕಂಟ್ರಾಕ್ಟರುಗಳನ್ನು ನೇಮಿಸಿದ್ದಾರೆ ತಾ ೭-೬-೫೫ರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಅವರು ಪ್ರಕಟಿಸಿದ ಜಾಹೀರಾತು ಹೀಗಿದೆ. "Wanted 20 lorries in perfect working condition with new or dependable heavy duty tyres, for transporting about 3,00,000 cft of timber from Nagarahole Range to the Coorg Timber Depot at Hunsur for a period of two years at 0-15-6 per cubic foot. This rate being inclusive of of loading and unloading charges. Preference will be given to these who have four or more lorries" "ನಾಗರಹೊಳೆ ರೇಂಜಿನಿಂದ ಹುಣಸೂರಿನಲ್ಲಿರುವ ಕೊಡಗು ಫಾರೆಸ್ಟ್ ಟೆಂಬರ್ ಡಿಪೋಕ್ಕೆ ಮೂರು ಲಕ್ಷ ಘನ ಅಡಿ ಟೆಂಬರ್ ಸಾಗಿಸಲು ಉತ್ತಮ ಸ್ಥಿತಿಯಲ್ಲಿರುವ ೨೦ ಲಾರಿಗಳು ಘನ ಅಡಿಗೆ ೦-೧೫-೬ ದರದಲ್ಲಿ ಎರಡು ವರ್ಷಗಳ ಅವಧಿಯ ವರೆಗೆ ಬೇಕಾಗಿದೆ. ಈ ದರದಲ್ಲಿ ಲಾರಿ ಲೋಡ್ ಮಾಡುವ ಮತ್ತು ಖಾಲಿ ಮಾಡುವ ಖರ್ಚು ಸೇರಿದೆ. ನಾಲ್ಕು ಲಾರಿಗಳಿಗಿಂತಾ ಹೆಚ್ಚಿರುವವರಿಗೆ ಹೆಚ್ಚಿನ ಗಮನ ಕೊಡಲಾಗುವದು". ಈ ಜಾಹೀರಾತನ್ನು ನೋಡಿದರೆ ದೊಡ್ಡ ಕಂಟ್ರಾಕ್ಟರಿನ್ನುವ ಇವರೂ ಕೂಡ ಚಿಕ್ಕ ಲಾರಿ ಮಾಲೀಕರ ಮೂಲಕವೇ ಈ ಜವಾಬ್ದಾರಿಯನ್ನು ಒಪ್ಪಿಕೊಂಡಿರುವರು. ಬೋರಯ್ಯ ಬಸವಯ್ಯನವರು ಮಾಡಲೊಪ್ಪಿದ ಕೆಲಸವನ್ನೇ ನಮ್ಮ ಸರಕಾರ ಮಾಡಬಹುದಿತ್ತು. ಹಾಗೆ ಮಾಡಿದ್ದರೆ ನಮ್ಮ ಸರಕಾರಕ್ಕೂ ೦-೧೫-೬ ದರದಲ್ಲಿ ಯೂ ಆದಕ್ಕೆ ಕಡಿಮೆಯಾಗಿ ಕಂಟ್ರಾಕ್ಟರರು ದೊರೆಯುತಿದ್ದರು. ಇದು ಬಿಟ್ಟು ದೊಡ್ಡ ಕಂಟ್ರಾಕ್ಟರಿಗೆ ೧-೧-೬ ದರದಲ್ಲಿ ಎರಡು ವರ್ಷದ ಕಂಟ್ರಾಕ್ಟು ಕೊಟ್ಟು ಪ್ರತಿ ಘನ ಅಡಿಗೆ ೨ ಆಣೆ ಲಾಭ ಒದಗಿಸಿಕೊಟ್ಟಿದ್ದಾರೆ. ಇದರಿಂದ ಎರಡು ವರ್ಷಕ್ಕೆ ಸುಮಾರು ೭೫ ಸಾವಿರರೂಪಾಯಿ ಬೋರಯ್ಯಬಸವಯ್ಯ ಕಂಪೆನಿಗೆ ಸೇರುವಂತಾಯಿತಲ್ಲದೆ ಚಿಲ್ಲರೆ ಕಂಟ್ರಾಕ್ಟರಿಗೆ ಕಂಟ್ರಾಕ್ಟು ಕೊಟ್ಟು ಅವರು ಸರಿಯಾಗಿ ವಹಿವಾಟು ಮಾಡುವಂತೆ ಇಲಾಖೆಯವರು ನೋಡಿಕೊಂಡಿದ್ದರೆ ಈ ಹಣ ಕೊಡಗು ಸರಕಾರಕ್ಕೆ ಉಳಿಯುತ್ತಿರಲಿಲ್ಲವೇ? ನಾಲ್ಕು ದನಗಳನ್ನು ಕೊಂಡು ಒಂದು ಹೆಬ್ಬುಲಿಯನ್ನು ಸಾಕಿದಂತೆ ಈ ಸರಕಾರದ ನೀತಿಯೂಗಿದೆ ಜನಪ್ರತಿನಿಧಿಗಳು ಇದನ್ನು ತಿಳಿದು ಎಚ್ಚರಿಕೆ ವಹಿಸಬೇಕು. ಮಿತ್ರಂಣ

ಜನಹಿತ ಸಂಘ, ಮಡಿಕೇರಿ.

ಜನತೆಯ ಅವಗಾಹನೆಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ಈ ಮೊಡಲು ಪತ್ರಿಕೆಗಳಲ್ಲಿ ಬತ್ತ ಮತ್ತು ಅಕ್ಕಿಯ ವ್ಯೆವಾಟು ಮತ್ತು ಮೂರಾಟದ ನಿಯಂತ್ರಣಕ್ಕೆ ಸರಕಾರವು ಮಾಡಿದ ತಿದ್ದುಪಡಿಯನ್ನು ಈ ಕೆಳಗಿನ ಅರ್ಥ ಬರುವಂತೆ ಪ್ರಕಟಿಸಲಾಗಿದೆ

'ದೇಶದೊಳಗೆ ಸ್ವಂತ ಉಪಯೋಗಕ್ಕಾಗಿ ಯಾರು ಬೇಕಾದರೂ ೬೦೦ ಸೇರು ಬತ್ತ ಯಾ ೩೦೦ ಸೇರು ಅಕ್ಕಿ ತಾಗಿಸಬಹುದು. ಬತ್ತ ಕುಟ್ಟಿ ಜೀವಿಸುತಿದ್ದವರು ಹಾಗೆಯೇ ಬತ್ತ ಕುಟ್ಟಬಹುದು. ಆದರೆ ಅಕ್ಕಿಯನ್ನು ರೇಶನ್ ಅಂಗಡಿಗೇ ನೇ ಕೊಡಬೇಕು.'

ಆದರೆ ಕೊಡಗು ಗಜೆಟ್ ತಾ. ೧೦ರ ಇಸ್ತಿಹಾರ್‌ನಾಮೆ ನಂ. ೨೩೪/R ತಾ. ೯ರಲ್ಲಿ ಈ ಕೆಳಗಿನ ಅರ್ಥ ಬರುವಂತೆ ಪ್ರಕಟಿಸಲಾಗಿದೆ.

ಸದಸ್ಯ ಗ್ರಾಮಗಳ ವಿನಹ, ಕೊಡಗಿನ ಇತರ ಗ್ರಾಮಗಳಲ್ಲಿ ಸರಕಾರವಾಗಿ ರೇಷನ್ ಅಧಿಕಾರಿಗಳ ಅನುಮತಿ ಇಲ್ಲದೆ ೬೦೦ ಸೇರು ಬತ್ತ ಅಥವ ೩೦೦ ಸೇರು ಅಕ್ಕಿ ಯಾ ರಾಗಿಯನ್ನು ಸ್ವಂತ ಉಪಯೋಗಕ್ಕಾಗಲಿ ಅಥವಾ ಮೂರಾಟಕ್ಕಾಗಲೀ ಅಥವಾ ಅಧಿಕೃತ ಏಜೆಂಟರುಗಳಿಗೆ ಕೊಡಲಿಕ್ಕಾಗಲಿ ಯಾ ರೇಷನ್ ಡಿಪೋಗಳಿಗೆ ಕೊಡಲಿಕ್ಕಾಗಲಿ ಸಾಗಿಸಬಹಕದು.

ಈ ವೇಲೆ ನವೂದಿಸಿದ ಪ್ರಮಾಣಕ್ಕಿಂತ ಹೆಚ್ಚು ಸಾಗಿಸಲು, ರೇಷನ್ ಅಧಿಕಾರಿಗಳ ಲಿಖಿತ ಅನುಮತಿಯನ್ನು ಪಡೆಯತಕ್ಕದ್ದು.

ಅದರಿಂದ ಯಾವನೇ ಒಬ್ಬನು ಮೇಲೆ ನವೂದಿಸಿದ ಪ್ರಮಾಣಕ್ಕೊಳಪಟ್ಟು ಬತ್ತ, ಅಕ್ಕಿ ಮತ್ತ ರಾಗಿಯನ್ನು ಸರಹದ್ದು ಗ್ರಾಮಗಳ ವಿನಹ ಇತರ ಎಲ್ಲಾ ಸ್ಥಳಗಳಲ್ಲೂ ಯಾವುದೇ ತಡೆಯಿಲ್ಲದೆ, ಯಾರಿಗೂ ಮೂರಾಟ ಮಾಡಲುಬಹುದು ಮತ್ತು ಕೊಂಡುಕೊಳ್ಳಲೂಬಹುದು.

ಕೆ. ಕೆ. ತಿಪ್ಪಯ್ಯ.
ಗೌ. ಕಾರ್ಯದರ್ಶಿ,

'ಕ್ರಾಂತಿಕುಮಾರ'ರಿಗೊಂದು ಉತ್ತರ.

ನೀವು ತಾರೀಕು ೨೦-೬-೫೫ರ 'ಕೊಡಗು' ಪತ್ರಿಕೆಯ ಓದುಗರ ಓಲೆಗಳು ಎಂಬ ಶಿರೋನಾಮೆಯಲ್ಲಿ ವೀರಾಜಪೇಟೆ ಮುನ್ಸಿಪಾಲಿಟಿಯ ಕಾರ್ಯದರ್ಶಿಯು ಮಂಡಲಿಯ ಕೆಲಸದ ಮೇಲೆ ಬರೆದ ಲೇಖನ ಓದಿದೆನು. ವಿಚಾರಗಳನ್ನು ಪರಿಶೀಲಿಸದೆ ಬರೆದ ಆ ಲೇಖನಕ್ಕಾಗಿ ವಿಷಾದಿಸಬೇಕಾಗಿದೆ. ಕೆಲವು ನಿಜಸಂಗತಿಗಳನ್ನು ಇಲ್ಲಿ ಬರೆಯಲಾಗಿದೆ.

ಮುನ್ಸಿಪಲ್ ಆಫೀಸು ರೋಡು ಮತ್ತು ಮುನ್ಸಿಪಲ್ ಪ್ರೆಸಿಡೆಂಟರ ಮನೆಯವರೆಗೆ ಹೊಸ್ತ ರೋಡಿಗೆ ಟಾರುಮಾಡಿದೆ ಎಂತ ನೀವು ಬರೆದಿರುತ್ತೀರಿ. ರೋಡು ರಿಪೇರಿ ಮತ್ತು ಟಾರು ಕೆಲಸಗಳು ಮುನ್ಸಿಪಲ್ ಮೆಂಬರುಗಳೆಲ್ಲರ ಒಮ್ಮತ ಅಭಿಪ್ರಾಯಗಳ ಮೇಲೆ ಆಗತಕ್ಕ ಕಾರ್ಯಗಳಾಗಿರುತ್ತವೆ. ಅದಲ್ಲದೆ ಮೇಲ್ಕಂಡ ರೋಡುಗಳಲ್ಲಿ ವಾಹನಗಳ ಓಡಾಟ ಜಾಸ್ತಿಯಾಗಿರುವುದು ಮತ್ತು ಸರಕಾರಿ ಆಫೀಸುಗಳು ಇರುವುದು ಇವು ಕಾರಣವಲ್ಲದೆ ನಿಮ್ಮ ಅಭಿಪ್ರಾಯದಂತೆ ಹೀನೋದ್ದೇಶದಿಂದ ಈ ಕಾರ್ಯವನ್ನು ಕೈಕೊಂಡಿಲ್ಲ. ಈಗಲೂ ಸಹ ಚಂಬೆಬೆಳಿಯೂರು ರೋಡು, ಚರ್ಚ್ ಬೀದಿ ಮತ್ತು ದೇವಾಂಗ ಬೀದಿಗಳಿಗೆ ಟಾರು ಮಾಡಲು ಸುಮಾರು ಏಳು ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ಅಂದಾಜು ಮಂಜೂರುಮಾಡಿ ಮೇಳೆಗಾಲ ಕಳೆದ ಕೂಡಲೆ ಕೆಲಸ ಸುರುಮಾಡಬೇಕೆಂದು ನಿರ್ಧರಿಸಲಾಗಿದೆ.

ಎರಡನೆಯದಾಗಿ ಮುನ್ಸಿಪಾಲಿಟಿಯು ಜನ್ಮ ೫೨ ಪೆಟ್ರೋಲ್‌ಮ್ಯಾಕ್ಸ್ ಲೈಟುಗಳಿದ್ದು ಅವುಗಳನ್ನು ಉರಿಸಲು ಮೂರು ಜನರು ಖಾಯಂ ಆಗಿ ಇರುತ್ತಾರೆ. ಪ್ರತಿಯೊಬ್ಬರೂ ೧೭ ಅಥವ ೧೮ ಲೈಟುಗಳನ್ನು ಹತ್ತಿಸುತ್ತಾರೆ ಅವರು ಲೈಟು ಹತ್ತಿಸಲು ಸಾಯಂಕಾಲ ೫-೩೦ ಗಂಟೆಗೆ ಸುರುಮಾಡಿದರೆ ಒಂದೊಂದು ಲೈಟಿಗೆ ಸುಮಾರು ಹತ್ತು ನಿಮಿಷಗಳಂತೆ ಸುಮಾರು ಮೂರು ಗಂಟೆಗಳ ಕಾಲ ಹಿಡಿಯುತ್ತದೆ. ಪ್ರತಿಯೊಬ್ಬ ಲೈಟು ಹಚ್ಚುವವರೂ ರಾತ್ರಿ ೯-೩೦ ಗಂಟೆಯ ಮೇಲೆ ಪುನಹ್ ಒಂದು ಸರ್ತಿ ಲೈಟುಗಳನ್ನು ನೋಡಿಕೊಂಡು ಮನೆಗೆ ಹೋಗುವುದು ವಾಡಿಕೆಯಾಗಿದೆ. ಈ ಮಧ್ಯೆ ಯಾವುದಾದರೂ ಲೈಟು ಸರಿಯಾಗಿ ಉರಿಯದೆ ಇರುವ ವಿಷಯವನ್ನು ಸಾರ್ವಜನಿಕರೂ ಸಹ ಕರೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದಲ್ಲಿ ಅವರು ಅದಕ್ಕೆ ತಕ್ಕ ಬಂದೋಬಸ್ತು ಮಾಡುತಾರೆ.

ಮೂರನೆಯದಾಗಿ ಹೊಟೇಲುಗಳ ಶುಚಿತ್ವವನ್ನು ಕೂಡ ಪ್ರಸ್ತಾಪಿಸಿರುತ್ತೀರಿ ಹೊಟೇಲುಗಳೇ ಏಕೆ ಇಡೀ ಟೌನಿನ ಶುಚಿತ್ವವನ್ನೂ ಸಮರ್ಪಕವಾಗಿ ಕಾಪಾಡಿಕೊಂಡು ಬರುತ್ತಿರುವ ಸ್ಯಾನಿಟರಿ ಇನ್ಸ್‌ಪೆಕ್ಟರ ಮೇಲೆ ಫಿರ್ಯಾದಿಗಳಿರಬಹುದಾದ ವ್ಯಕ್ತಿಕ ದ್ವೇಷಾಸೂಯೆಗಳನ್ನು ಹೊರಗೆಡಹುತ್ತೀರೆಂಬುದು ನಿಮ್ಮ ಲೇಖನದಿಂದ ಸ್ಪಷ್ಟವಾಗುತ್ತದೆ. ಆವರು ಪ್ರತಿದಿನವೂ ಪ್ರತಿ ಹೊಟೇಲುಗಳನ್ನು ತನಿಕೆ ಮಾಡುವುದು ಸಾಧ್ಯವಿಲ್ಲದಾಗಿದೆ ಮತ್ತು ಸಾರ್ವಜನಿಕರು ಸಹ ಕುಂದುಕೊರತೆಗಳನ್ನು ಕಂಡಾಗ ಸಂಬಂಧಪಟ್ಟವರಿಗೆ ವರದಿಮಾಡಿದಲ್ಲಿ ಅವರು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವರಾಗಿರುತ್ತಾರೆ. ಕಳೆದ ಒಂದು ವರ್ಷದಿಂದ ಸಾರ್ವಜನಿರ ಆರೋಗ್ಯಕ್ಕೆ ಭಂಗತರಬಹುದಾದ ವಿಷಯಗಳನ್ನು ಪರಿಶೀಲಿಸಿ ಸುಮಾರು ಒಂದು ನೂರು ಕೇಸುಗಳನ್ನು ಕೋರ್ಟ್ ಮೂಲಕ ವ್ಯವಹರಿಸಿ ಕ್ರಮವಹಿಸಿರುತ್ತಾರೆ ಈಗಲೂ ಸಹ ಹೋಟೆಲುಗಳ ಶುಚಿತ್ವಕ್ಕೆ ಸಂಬಂಧಪಟ್ಟ ಕೆಲವು ಕೇಸುಗಳು ಕೋರ್ಟಿನಲ್ಲಿ ವಿಚಾರಣೆಗಾಗಿ ಕಾದಿವೆ. ಮುನಿಸೊಲೀಕರುಗಳು ತಮ್ಮ ಬಾಡಿಗೆದಾರರುಗಳಿಗೆ ಸರಿಯಾದ ಕಕ್ಕಸುಗಳನ್ನು ಕಟ್ಟಿಸದೆ ಇದ್ದುದನ್ನು ಕಂಡುಹಿಡಿದು ಅಂತಹವುಗಳನ್ನು ನೋಟೀಸು ಮೂಲಕ ಕ್ರಮವಹಿಸಿ ನೋಟೀಸಿಗೂ ಗಮನಕೊಡದಂಥವರುಗಳನ್ನು ಕೋರ್ಟಿಗೆ ಹಾಜರುಪಡಿಸಿದ್ದಾರೆ. ಇವರನ್ನು ದೂರುವದು ತಪ್ಪು.

ಕಡೆಯದಾಗಿ ವಾಚನಾಲಯದ ಸಲಕರಣೆಗಳನ್ನು ಮಾಡಿಕೊಡಬೇಕೆಂದು ಸಾರ್ವಜನಿಕರಿಂದ ಬಂದ ಅರ್ಜಿ ವಿಚಾರದಲ್ಲಿ ಅವರ ಸಲಹೆ ಪಡೆಯಲು ಒಂದು ವಿಷಯಕ್ಕೆ ಏರ್ಪಡಿಸಿದ್ದು ನೋಟೀಸು ಮೂಲಕ ಪ್ರಚುರಪಡಿಸಿದ್ದಾಗ್ಯೂ ಸಾರ್ವಜನಿಕರು ಬಂದು ವಾಚನಾಲಯದ ಅಭಿವೃದ್ಧಿಗಾಗಿ ತಕ್ಕ ಸಲಹೆಗಳನ್ನು ಕೊಡಲು ಯಾರೂ ಕೂಡ ಮುಂದೆ ಬರಲಿಲ್ಲ. ಮುನ್ಸಿಪಾಲಿಟಿಯ ಕಾರ್ಯದರ್ಶಿ ಮಂಡಲಿಯಲ್ಲಿ ಈಗಲೂ ಸದರಿ ಅರ್ಜಿಯು ಸಂಬಂಧಪಟ್ಟ ಅಧಿಕಾರಿಗಳ ಪರಿಶೀಲನೆಲ್ಲಿದ್ದು ವಾಚನಾಲಯದ ಸಲಕರಣೆಗಳ ಶೀಘ್ರದಲ್ಲಿಯೇ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ಅಲ್ಲದೆ ವಾಚನಾಲವು ಬೆಳಿಗ್ಗೆ ೭ ಗಂಟೆಯಿಂದ ೧೦ ಗಂಟೆಯ ವರೆಗೆ ಸಾಯಂಕಾಲ ೫ ಗಂಟೆಯಿಂದ ೬ ಗಂಟೆಯ ವರೆಗೆ ತೆರೆದಿದ್ದು ಖಾಯಂ ಆರು ಜೇಪರುಗಳು ಹಾಲಿ ವಾಚನಾಲಯದಲ್ಲಿ ಇಡಲ್ಪಡುತ್ತವೆ. ಆದರೆ ನೀವು ಬರೆದಿರುವಂತೆ ಬರಿ ಎರಡು ಪೇಪರುಗಳಲ್ಲ. ಈ ವಿಚಾರವನ್ನು ಪರಿಶೀಲಿಸಿದರೆ ನೀವು ಅಸತ್ಯದಿಂದ ಮತ್ತು ಹೀನೋದ್ದೇಶದಿಂದ ಬರೆದಿರುವುದೆಂಬ ಬಗ್ಗೆ ಸಂದೇಹವೇ ಇಲ್ಲ. 'ಶಾಂತಿ ಕ.ಮೂ.'

ವಿನೋದದಲ್ಲಿ:

ಬುಶ್ ಶರ್ಟಿನ ಆತ್ಮಕಥೆ.

ಲೇ:—ವೈದ್ಯಗುರು ಎಂ. ಆರ್. ಭಟ್.

'ಭಗಿನೀ, ನಮಸ್ಕಾರ,' ಎಂದು ಶ್ರೀಮತೀ ಸೀರೆದೇವಿಯು ಹೇಳಿದಳು.

'ಎಲೇ,.....ನಾನು ಭಗಿನಿಯಲ್ಲ; ಬಂಧು ಸಾಹೇಬನಾಗಿರುವೆನ; ನನ್ನನ್ನು ಜನರು ಬುಶ್‌ಶರ್ಟೆಂದು ಕರೆಯುವರು; ನಿನಗೆ ಸ್ವಲ್ಪ ಭ್ರಮೆಯಾಗಿರಬಹುದೆಂದು ನನಗೆ ತೋರುತ್ತದೆ.' ಎಂದು ಶ್ರೀಮಾನ್ ಬುಶ್‌ಶರ್ಟನು ಉತ್ತರಕೊಟ್ಟನು.

'ಕ್ಷಮಿಸು. ನಾನು ನಿನ್ನನ್ನು ಕುಮಾರೀ ಜಂಪರ್ ರಾಣಿಯೆಂದು ಭಾವಿಸಿದ್ದೆನು; ಅಂದು ನೀನು ಬಹು ದೊಡ್ಡ ಶೂರ ವೀರನಾಗಿದ್ದೀ; ಈ ಪೌರುಷಹೀನ ಅವಸ್ಥೆಯು ನಿನಗೆ ಹೇಗೆ ಸಂಭವಿಸಿತ? ನಿನ್ನ ಅವಸ್ಥೆಯನ್ನು ನೋಡಿದಾಗ, ನೀನು ಸರ್ಕಸ್ಸಿನಲ್ಲಿ ಜೋಕರನ ಕಾರ್ಯಮಾಡುವುದನ್ನು ಪ್ರಾರಂಭಿಸಿರುವಿಯೆಂದು ಭಾಸವಾಗುತ್ತದೆ'

ಆ ದಿನ, ಯಮುನಾ ತಟದ ಮೇಲೆ, ಮಡಿವಾಳ ಹುಟ್ಟಿದ ಬದಿಯಲ್ಲಿ, ಮೂರು ರಕ್ಷಕರುಳ್ಳ ಎರಡು ಕಂಬಗಳಲ್ಲಿ ಹಾಗಿಸಿಟ್ಟ ನಿಲಿಹಗ್ಗದ ಮೇಲೆ ಶ್ರೀಮತೀ ಸೀರೆ ದೇವಿಯು ಸ್ನಾನ ಮಾಡಿ, ತನ್ನ ಕೂದಲನ್ನು ಉಜ್ಜಿ ಒಣಗಿಸುತ್ತಿದ್ದಳು; ಪಕ್ಕನೆ, ವಾಯುವಿನ ಆಘಾತದಿಂದ ಬದಿಯಲ್ಲಿ ತೂಗ ಹಾಕಿದ ಶ್ರೀಮಾನ್ ಬುಶ್ ಶರ್ಟನು ದಡದಡಿಸಿದಾಗ ಶ್ರೀಮತೀ ಸೀರೆದೇವಿಯು ಅವನನ್ನು ಕುಮಾರೀ ಜಂಪರ್ ರಾಣಿಯೆಂದು ಭಾವಿಸಿ, 'ಭಗಿನಿ,' ಎಂದು ಹೇಳಲೇ ಬಿಟ್ಟಳು. 'ಯಾವುದಾದರೂ ಸರ್ಕಸ್ಸಿನಲ್ಲಿ ಜೋಕರ ಕೆಲಸ ಮಾಡುತ್ತಿಯೋ' ಎಂದು ಅವನೊಡನೆ ಸೀರೆ ದೇವಿಯು ಕೇಳಿದಳು. ಶ್ರೀಮಾನ್ ಬುಶ್‌ಶರ್ಟನು ತನ್ನ ಅವಸ್ಥೆಯನ್ನು ಕಂಡು, ಲಜ್ಜಿತನಾದನು; ಸ್ವಲ್ಪ ರೇಗಿ, ಕೆಂಪಾಗಿ ಥಳಥಳಿಸಿದನು; ಅನಂತರ, ಸ್ವಲ್ಪ ತೆರೆಬಂದು, ಬಾಗಿ ಬಳಕಿ ಬುಶ್‌ಶರ್ಟನ್ನು ತನ್ನ ಆತ್ಮಕಥೆಯನ್ನು ಹೇಳಲು ಪ್ರಾರಂಭಿಸಿದನು. ಹತ್ತಿರವೇ ತೂಗಾಡಿಸಿದ ಒಳ ಅಂಗಿಯೂ, ಮಂದಹಾಸದ ಬಳಿಕ, ಬಹಳ ಅಭಿಮಾನದಿಂದ ಶ್ರೀಮಾನ್ ಬುಶ್‌ಶರ್ಟಿನ ಆತ್ಮಕಥೆಯನ್ನು ಕೇಳಿತು.

ಬುಶ್‌ಶರ್ಟನು ಹೀಗೆ ಹೇಳಿದನು:—

'ಭಗಿನೀ! ಇಂದಿಗೂ ನೀವು ಭಾರತೀಯ ಸಂಸ್ಕೃತಿಯೊಡನೆ, ಅಂಟಿಕೊಂಡಿರುತ್ತೀ; ಇದರಿಂದಲೇ, ನಿನಗೆ ನಾನು ಜೋಕರನೆಂದು ಕಾಣಿಸುತ್ತೇನೆ; ಸಭ್ಯತೆಯ ಓಟದಲ್ಲಿ ಪೇರಿಸ್ಸಿನ ಯುವತಿಯರಿಗಿಂತಲೂ ನಾಲ್ಕು ಹೆಜ್ಜೆ ಮುಂದೆ ಹೋಗಿರುತ್ತೇನೆ; ನೀನು ಏನು ತಿಳಿದೆಯೊ!'

'ಒಂದು ಕಾಲದಲ್ಲಿ ನಾನು ಖಾಕೀ ಕೋಟನ್ನು ಒಲಿಸಿಕೊಂಡಿದ್ದೆನು; ಒಮ್ಮೊಮ್ಮೆ ಹಸುರು ಕೋಟು ಸಹ ನನ್ನವಾಗಿತ್ತು; ನನ್ನ ಎರಡು ಉದ್ದುದ್ದ ತೋಳುಗಳು ಮತ್ತು ಅವುಗಳಲ್ಲಿ ಎರಡೆರಡು ಬಟನುಗಳು ಇದ್ದವು. ಅದೊಂದು ಕಾಲ ನನ್ನ ನಡುಕಟ್ಟಿನ ಸೈನಿಕ ಅಧಿಕಾರಿಯ ಸೊಂಟದಂತೆ, ಬಿಗಿಯೂಗಿ ಹೊಟ್ಟೆಯನ್ನು ಕಟ್ಟುತ್ತಿತ್ತು. ನನ್ನ ಭುಜಗಳ ಮೇಲೆ ಒಂದೊಂದು ಉಂಗುರವಿತ್ತು; ಅದರ ಮಧ್ಯದಿಂದ ಹೆಂಗಸರ ಜುಟ್ಟಿನಂತಿರುವ ಸೈನಿಕರ ಡಾರವು ಹೊರ ಬಂದು ಜೇಲದಲ್ಲಿದ್ದ ಅಧಿಕಾರಿಯ ಪೀಪಿಗೆ ಕಟ್ಟಲ್ಪಡುತ್ತಿತ್ತು; ನನಗೆ ನಾಲ್ಕು ಜೇಬುಗಳಿದ್ದವು; ಅವುಗಳಿಗೆಲ್ಲಾ ಮುಚ್ಚಿಕೆಗಳಿದ್ದವು. ನನ್ನ ಎದೆಯು ಎಡಚೀಲದ ಮೇಲೆ, ಅಧಿಕಾರಿಯ ಪೀಪಿಗೆ ಕಟ್ಟಲ್ಪಡುತ್ತಿತ್ತು; ಒಂದು ತೆಳ್ಳಗಿನ, ಉದ್ದವಾದ, ಬಣ್ಣ ಬಣ್ಣದ ಪಟ್ಟಿಯು ಸಹಾ ಅದಕ್ಕಿತ್ತು.'

'ಇದೆಲ್ಲಾ ಗತ ವಿಶ್ವಯಂದ್ದಗಳಿಗಿಂತ ಮುಂಚಿನ ವಿಷಯವಾಗಿದೆ; ಸುಮಾರು ಸನ್ ೧೯೦೪ರ ತನಕದ ವಿಷಯವು. ಇದು ನನ್ನ ಜೀವನದ ಶೌರ್ಯಮಯ ಕಾಲವಾಗಿತ್ತು; ಆದರೆ, ಆ ಕಾಲದಲ್ಲಿ ನಾನು ಇಷ್ಟು ಸಭ್ಯನಾಗಿರಲಿಲ್ಲ. ಸ್ವಲ್ಪ ಕಾಲದ ನಂತರ, ನಾನು ಸೈನಿಕ–ಉಡುಪನ್ನು ಬಿಟ್ಟು ಬಿಟ್ಟೆ, ಬಜಾರುಗಳಲ್ಲಿ ಹೊರಟು ಬಂದೆನು. ಅನಂತರ ನಾನು ಬಿಳಿ ಹಾಗೂ ಅನ್ಯ ಬಣ್ಣಗಳನ್ನು ಒಲಿಸಿಕೊಳ್ಳಲು ಪ್ರಾರಂಭಿಸಿದೆನು. ಸನ್ ೧೯೨೪ರಲ್ಲಿ ಹೆಕೆಯು ಹೆಚ್ಚು ಬಿದ್ದಿತ್ತು. ಅಂದು, ನಾನು ನನ್ನ ಭುಜಗಳ ಮೇಲಿದ್ದ ಉಂಗುರಗಳನ್ನು ತೊಲಗಿಸಿದೆನು. ನನ್ನ ತೋಳುಗಳನ್ನು ಅರ್ಧವಾಗಿರಿಸಿದೆನು. ನಾಲ್ಕು ದೊಡ್ಡ ಜೇಬುಗಳ ಬದಲಿಗೆ, ಒಂದು ಸಣ್ಣ ಜೇಬು ಎದೆಯ ಮೇಲೆ ಇರುವುದು ಉತ್ಕೃಷ್ಟವೆಂದು ಕಾಲೇಜು ವಿದ್ಯಾರ್ಥಿಗಳು ಅಂದರು. ನಡುಕಟ್ಟಿನ ಉಪಯೋಗ ಕೇವಲ ಸೈನಿಕ ಅಧಿಕಾರಿಯೇ ಮಾಡಲಿಯೆಂದು ಸಹ ಅವರು ಹೇಳಿದರು.'

'ಮೂರು ಜೇಬು ಎರಡು ಉಂಗುರ, ನಡುಕಟ್ಟು ಮತ್ತು ಅರ್ಧ ಅರ್ಧ ತೋಳುಗಳನ್ನು ವಂದಿಸಿ ಕಳುಹಿಸಿಕೊಟ್ಟ ಬಳಿಕ, ಬಣ್ಣ ಬಣ್ಣದ ಮನಮೋಹಕ ರೂಪವನ್ನು ನೋಡಿ ಅನೇಕ ಐಶ್ವರ್ಯವಂತರ ವಕ್ಕಳು ನನ್ನೊಡನೆ ವಿಶ್ವತ್ವವನ್ನು ಕಟ್ಟಿಕೊಂಡರು. ರೇಶ್ಮೆ, ಹಾಗೂ ಲಿನನ್ ಧಾರಣವೂಡಿ, ಅವರೊಡನೆ ಉಪಹಾರ ಗೃಹಗಳಲ್ಲಿ, ಮಧ್ಯ ಶಾಲೆಗಳಲ್ಲಿ ಮತ್ತು ಸಿನೇಮಾಗೃಹಗಳಲ್ಲಿ ಹೋಗಿ ನಿಂತೆನು. ಪಾದರಕ್ಷೆಗಳಲ್ಲಿ ಕಾಲುಚೀಲಗಳನ್ನು ಅಡಗಿಸಿಡುವ ದೊಡ್ಡ ದೊಡ್ಡ ಅಧಿಕಾರಿಯ ಮನೆಗಳಲ್ಲಿ ಹೋಗಿ, ನೆಲೆಸಿದೆನು.'

'ನನಗೆ ಈಗ ನನ್ನ ಜೇಬು ಹಾಗೂ ಬಟನು ಕೆಟ್ಟದೆನಿಸಿತು; ನಾನೀಗ ಉಳಿದ ಒಂದು ಜೇಬನ್ನು ಸಹ ಹಾರಿಸಿಬಿಟ್ಟೆನ; ಮತ್ತು ಸುಂದರ ಸುಂದರ ಬಟನುಗಳನ್ನು ಹಾಕಿಸಿದೆನು. ಮಕ್ಕಳ ಉಣ್ಣೆ ಬಟ್ಟೆಗಳಲ್ಲಿ ಕಟ್ಟಿಸಿದಂತೆ, ನಾನು ಸಹ ಬಟನುಗಳನ್ನು ಹೆಚ್ಚಿಸಿದೆನು. ನನ್ನ ಗದ್ದಿಗೆ ಮೇಲೆ ಪ್ಯಾಕಿನಲ್ಲಿರುವ ಸಣ್ಣ ಸಣ್ಣ ಮುತ್ತುಗಳಂತೆ ಬಟನುಗಳು ಕಾಣಿಸಿದವು. ಅನಂತರ, ಉದ್ದದಲ್ಲಿ ಕಡಿಮೆಯಾದೆನ; ಕೆಲವು ಜನರ ಬಟನುಗಳ ಬದಲಾಗಿ, ಸರಪಳಿಯನ್ನು ಸಹಾ ಇಡಿಸಲು ಆರಂಭವೂಡಿದರು.

'ಇದೀಗ ಎಲ್ಲಾ ಕಡೆಗಳಲ್ಲಿಯೂ ನನ್ನ ರಾಜ್ಯವು ಕಾಣಿಸುತ್ತದೆ. ನಾನು ಮಂತ್ರಿಗಳ ಹಾಗೂ ರಾಜ್ಯಪಾಲರ ಶರೀರಗಳ ಮೇಲೆ ಖದ್ದರ್ ಧಾರಣವೂಡಿ ಸುಶೋಭಿತನಾಗಿರುತ್ತೇನೆ. ಒಂದು ಥೋತಿಯಲ್ಲಿರುವಷ್ಟು ವಸ್ತ್ರವನ್ನು ಸಹಾ ಭರಿಸುವುದಿಲ್ಲವೆಂಬುದು ನಿಜ- ಇಂದೀಗ ಅಧಿಕಾರಿಗಳ ಕ್ಲಾರ್ಕರಿಂದ ಪ್ರಾರಂಭಿಸಿ, ಪೇದೆಗಳ ತನಕ, ಸಕಲರ ಮನಸ್ಸಿನಲ್ಲಿ ರಾಜ್ಯಭಾರ ನಡಿಸುವೆನು. ಕೆಲವು ಸಾರಿ, ಒಬ್ಬ ಮುದುಕನು ಬಹಳ ಕಾಂತಿಯುಳ್ಳ ಹಾಗೂ ಆಕರ್ಷಕ ಬಣ್ಣದ ಜೊರ್ಜೆಟಿನ ಬುಶ್‌ಶರ್ಟ್ ಧರಿಸಿದುದನ್ನು ಸಹ ಅವಶ್ಯ ನೀವು ಕಂಡಿರಬಹುದು. ಪ್ರಥಮ ಪುತ್ರನು ಜನಿಸಿದ ಸ್ವಲ್ಪ ಸಮಯದೊಳಗೆ, ಉಡುಪು ತಯಾರಿಸುವಾಗ, ಅದಕ್ಕೆ ಬುಶ್‌ಶರ್ಟು ಸಹ ಹೊಲಿಸುವುದನ್ನು ನೀವು ಕಾಣುತ್ತೀರಿ. ಕೊಲೇಜಿನ ವಿದ್ಯಾರ್ಥಿಗಳು ಸಹಾ ಹೊಲಿಸುತ್ತಾರೆ. ವಿದ್ಯಾರ್ಥಿಗಳ ಪ್ರಶಂಸೆ ಮೂಡಿದಷ್ಟು ಕಡಿಮೆಯೇ ಸರಿ. ಅವರು ನನ್ನನ್ನು ಸಭ್ಯತೆಯ ದೇವತೆಯಾಗಿ ರಚಿಸಿರುವರು. ಮಧುರಾ, ಮುರ್ಶಿದಾಬಾದ, ಕಾಶ್ಮೀರ, ಚೀನ ಹಾಗೂ ಜಪಾನಿನ ರೇಶ್ಮೆ, ಜನರಸೀ ಜೊರ್ಜೆಟ್, ಮಲ್‌ಮಲ್, ಪಡದೆಯ ವಸ್ತ್ರ, ಜಂಪರಷ ವಸ್ತ್ರ, ಇನ್ನೂ ಹಲವು ವಿಧದ ವಸ್ತ್ರಗಳಲ್ಲಿ ನನ್ನ ಮೂನವು ವೃದ್ಧಿಯಾಗಿದೆ. ಸುಂದರಿಯರ ಚಿತ್ರ, ಕತ್ತೆಗಳಿಂದ ಪ್ರಾರಂಭಿಸಿ ಒಂಟೆಗಳ ತನಕ ಸಕಲ ಪ್ರಾಣಿಗಳ ಚಿತ್ರ; ಹಡಗಿನಿಂದ ಹಿಡಿದು ಎತ್ತು ಗಾಡಿಯ ತನಕದ ಸಕಲ ವಾಹನಗಳ ಚಿತ್ರ, ಇನ್ನಿತರ ಚಿತ್ರಗಳೂ ನನ್ನ ಮೇಲೆ ಅಂಕಿತ ಹಾಗೂ ಚಿತ್ರಿತವಾಗಿವೆ.

'ನೀವು ನೋಡಿರಬಹುದು. ನನ್ನ ತೋಳುಗಳು ಮತ್ತು ಸೊಂಟವು. ನನ್ನ ತಂಗಿ ಜಂಪರ್ ರಾಣಿಯಂತೆ, ಬಿಗುವಾಗಿನೆ; ಮಾತ್ರವಲ್ಲ, ನನ್ನ ಎತ್ತರವು ಸಹ ಕಡಿಬಂದಿದೆ. ನನ್ನ ಜೀವನದಲ್ಲಿ ಬಂದೇ ಬಾಲಸೆಯು ಉಳಿದಿದೆ. ಎಲೇ ಭಗವಾನನೇ, ಪಂಜಾಬೀ ಕಪ್ಪಸ, ಪೂರ್ವೀಕಂ ಚುಕಿ (ಬಾಡಿ), ಮದ್ರಾಸೀ ರವಕೆ, ಅಥವಾ ಅಧಿಕಾರಿಯ ಪತ್ನಿಗಳ ಬ್ಲೌಜುಗಳಂತೆ, ನನ್ನನ್ನು ಗಂಟು ಹಾಕಿ ಕಟ್ಟಿ, ಧರಿಸುವ ದಿನವು ಶೀಘ್ರವೇ ಬರಲಿಯೆಂದು ನಿನ್ನನ್ನು ನಾನು ಮರೆಹೋಗುತ್ತೇನೆ, ನವಯುವಕರ ಬಾಗಿ ಬಳಕುವ ಕೋಮಲ ಸೊಂಟವು ನಗ್ನವಾಗಿಯೇ ಇರಬೇಕೆಂದು ನನಗೆ ಇನ್ನೊಂದು ಅಭಿಲಾಷೆಯಿದೆ. ಆದರೆ, ಅಲ್ಲಿ ನೋಡಿರಿ; ಮಡಿವಾಳನು ಬಂದಿರುವನು; ಈಶ್ವರನ ಕೃಪೆಯಿಂದ ಒಂದೇ ಮೂಟೆಯಲ್ಲಿ ಕಟ್ಟಿ, ಅವನು ಕೊಂಡು ಹೋದರೆ ಒಳ್ಳೇದಾದೀತೆಂದು ಹೇಳಿಬಿಡುವೆನು.'

ಶ್ರೀಮತೀ ಸೀರೆ ದೇವಿಯು ಒಳಅಂಗಿಯ ಕಡೆಗೆ ನೋಡಿದಳು; ಮತ್ತು ನಕ್ಕಳು. ಒಳಅಂಗಿಯು ಸಹ ಶ್ರೀಮಾನ್ ಬುಶ್‌ಶರ್ಟಿನ ಸಭ್ಯತೆಯು ಕಲ್ಪನೆ ಮಾಡಿ, ಮಂದಹಾಸದಿಂದ ನಗಾಡಿತು;

———— ಪ್ರಭಾತ

ಹೈದರಾಬಾದ ನವಾಬ ದಂಪತಿಗಳಿಗೆ ೧೫ ಲಕ್ಷ ರೂಪಾಯಿ ದಂಡ

ಈ ಹಿಂದೆ ೫ ಲಕ್ಷ ರೂ. ಬೆಲೆಯ ರತ್ನಾಭರಣಗಳನ್ನು ಕಳುವಿನಿಂದ ಭಾರತದ ಹೊರಗೆ ಒಯ್ಯಲು ಯತ್ನಿಸಿದ ಹೈದರಾಬಾದು ಸರದಾರ ಮನೆತನದ ನವಾಬ ಜಾಹೀರ ಯಾರ ಜಂಗಬಹದ್ದೂರ್ ಹಾಗೂ ಅವರ ಪತ್ನಿ ಬೇಗಂ ಹಪಸಮಿ ಉನ್ನಿಸಾನಾ ಇವರಿಗೆ ಕ್ರಮವಾಗಿ ಹತ್ತು ಲಕ್ಷ ರೂ. ಹಾಗೂ ಐದು ಲಕ್ಷ ರೂ. ಗಳ ದಂಡಗಳನ್ನು ಬಾಂಬಯಿ ಸಂಕದ ಕಲೆಕ್ಟರರು ವಿಧಿಸಿದ್ದಾರೆ.

ಸಾಗರ ಸುಂಕ ಕಾಯಿದೆ ವೇರೆಗೆ ಇಂತಹ ಅಪರಾಧಗಳಿಗೆ ವಿಧಿಸಿದ ದಂಡಗಳಲ್ಲಿ ಇದೇ ಎಲ್ಲಕ್ಕೂ ಹೆಚ್ಚಿಗೆಯಾಗಿದೆ. ಯಾವತ್ತೂ ರತ್ನಾಭರಣಗಳನ್ನು ಸರಕಾರಕ್ಕೆ ಜಮೆ ಮಾಡಬೇಕೆಂದು ಕಲೆಕ್ಟರರು ಆಜ್ಞಾಪಿಸಿದ್ದಾರೆ.

ಏಪ್ರೆಲ್ ೧೯ರಂದು ಈ ದಂಪತಿಗಳು ಯೂರೋಪಕ್ಕೆ ಹೋಗುವ ಏರ್ ಇಂಡಿಯಾ ವಿಮಾನವನ್ನು ಹತ್ತುವದರಲ್ಲಿದ್ದರು. ಆ ಕಾಲಕ್ಕೆ ಅವರನ್ನು ಶೋಧಿಸಿ ರತ್ನ, ವಜ್ರ, ಪಚ್ಚೆ, ಮಾಣಿಕ್ಯಗಳಿಂದ ಖಚಿತವಾದ ಆಭರಣಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು.

ಮುನ್ಸೆಚ್ಚರಿಕೆಯ ವೇರೆಗೆ ಸುಂಕದ ಸಿಬ್ಬಂದಿಯವರು ನವಾಬರ ಸಣ್ಣ ಪೆಟ್ಟಿಗೆಯಲ್ಲಿ ಆಭರಣವನ್ನು ಕಂಡು ಹಿಡಿದರು. ಅನಂತರ ಅವರ ಸಂಶಯ ಹೆಚ್ಚಾಗಿ ಬೇಗಂಳು ತನ್ನ ಪಡಕ್ಕೆ ಕಟ್ಟಿದ ವಿಶೇಷ ಅರಿವೆ ಪಟ್ಟಿಯಲ್ಲಿದ್ದ ಆಭರಣಗಳನ್ನು ಬಯಲಿಗೆಳೆದರು.

ಸುಂಕದ ನಿಯಮಗಳ ವೇರೆಗೆ ಸಾಗರಯಾತ್ರೆಗೆ ಹೋಗುವ ಪಯಣಿಗನು ೫ ಸಾವಿರ ರೂ. ವಿುಕ್ಕದಷ್ಟು ಬೆಲೆಯ ರತ್ನಾಭರಣಗಳನ್ನು ಒಯ್ಯಬಲ್ಲನು. ಹೆಚ್ಚಿನ ಆಭರಣಗಳನ್ನು ಒಯ್ಯಬೇಕಾದರೆ ಭಾರತದ ರಿಜರ್ವ್ ಬ್ಯಾಂಕಿನ ಪರವಾನಗಿ ಪಡೆಯಬೇಕಾಗುವುದು. ಈ ದಂಪತಿಗಳು ತಮ್ಮ ಕೂಡ ೧೫,೨೫೦ ರೂ. ಬೆಲೆಯ ಆಭರಣಗಳನ್ನು ಒಯ್ಯಲು ಬ್ಯಾಂಕಿನ ಅಪ್ಪಣೆಯನ್ನು ಪಡೆದಿದ್ದರು.

ಅಪರಾಧದ ಸ್ವರೂಪ ಹಾಗೂ ಅಪರಾಧಿಗಳ ಸ್ಥಾನ ಮಾನ, ಅವರು ಕೈಕೊಂಡ ವಿಧಾನ ಇವುಗಳನ್ನು ಅನುಲಕ್ಷಿಸಿ ಇಷ್ಟೊಂದು ಮಹಾ ದಂಡವನ್ನೂ, ರತ್ನಾಭರಣಗಳ ಜಪ್ತಿಯನ್ನೂ ವಿಧಿಸಿರುವುದಾಗಿ ಕಲೆಕ್ಟರರಾದ ಶ್ರೀ ಎ. ಎನ್. ಸತ್ಯನಾಥನ್‌ರವರು ತಮ್ಮ ಆಜ್ಞೆಯಲ್ಲಿ ವಿಧಿಸಿದ್ದಾರೆ.

ಡಾ. ಪಟ್ಟಾಭಿಯವರು ಮಧ್ಯಪ್ರದೇಶದ ಗವರ್ನರ್

ಮಧ್ಯಪ್ರದೇಶದ ರಾಜ್ಯಪಾಲರಾದ ಶ್ರೀ ಮಂಗಲದಾಸ ಪಕ್ವಾಸಾ ಆವರು ನಿವೃತ್ತರಾಗಲಿದ್ದು ಆವರ ಸ್ಥಳಕ್ಕೆ ಡಾ. ಪಟ್ಟಾಭಿ ಸೀತಾರಾಮಯ್ಯನವರನ್ನು ಗವರ್ನರರಾಗಿ ನೇಮಿಸಲಾಗಿದೆ.

॥ ವಿವಿಧ ವಾರ್ತೆಗಳು ॥

ಕೋಜೆಯ ಬಂಡಾಯ.

ಕೊರಿಯಾದ ಕದನ ರಂಗದಲ್ಲಿ ಈಚೆಗೆ ಕೆಲವು ವಿಶೇಷ ಘಟನೆಗಳು ನಡೆದುವು–ಕೋಜೆ ದ್ವೀಪದಲ್ಲಿ ಕಮ್ಯೂನಿಸ್ಟ ಕೈದಿಗಳು ಶಿಬಿರದ ನಿಯಮಗಳನ್ನು ಉಲ್ಲಂಘಿಸಿ, ಮೇಲಧಿಕಾರಿಗಳ ಮೇಲೆ ಹಲ್ಲೆಯನ್ನೂ, ಸ್ವತಃ ಬಂಡಾಯವನ್ನೂ ಹೂಡುತ್ತಿರುವರು. ಈ ಕೈದಿಗಳನ್ನು ಬೇರೆ ಬೇರೆ ಗುಂಪುಗಳನ್ನಾಗಿ ಮಾಡಿ ದೂರ ದೂರ ಇಡಲು ಈಗ ಸಂಯುಕ್ತ ರಾಷ್ಟ್ರ ಸಂಘದ ಸೇನಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಪರಿಸ್ಥಿತಿ ಒಮ್ಮೊಮ್ಮೆ ವಿಷಮವಾವಸ್ಥೆಗೆ ಮುಟ್ಟಿದರೆ–ಮರುದಿನವೇ ತಣ್ಣಗಾಗುತ್ತದೆ. ಹೀಗೆ ಕೈದಿಗಳ ಬಂಡಾಯದ ಪ್ರಕರಣ ಒಂದೆಡೆ ನಡೆಯುತ್ತಿರುವಾಗ–ಪಾನ ಮುಂಜಾವಿನ ಕದನ ವಿರಾಮ ಮಾತುಕತೆಗಳು ನಿಂತುಹೋಗಿವೆ. ತಮ್ಮ ಆಖೈರು ಸೂಚನೆಯಲ್ಲಿ ಯಾವುದೇ ಪರಿವರ್ತನೆ ಸಾಧ್ಯವಿಲ್ಲವೆಂದೂ–ಕೈದಿಗಳ ವಿನಿಮಯದಲ್ಲಿ ಅನುಸರಿಸಲಿರುವ ತತ್ವದ ಬಗ್ಗೆ ಮಾಡಿದ ಈ ಸೂಚನೆಯನ್ನು ಚೆನ್ನಾಗಿ ಕಮ್ಯೂನಿಸ್ಟರು ಪರಾವರ್ತಿಸಬೇಕೆಂದೂ– ತದನಂತರವೇ, ಸಂಧಾನ ಮಾತುಕತೆಗಳು ಮುಂದರಿಯಬಹುದೆಂದೂ ಸಂಯುಕ್ತ ರಾಷ್ಟ್ರ ಸಂಘದವರು ಹೇಳಿದ್ದಾರೆ.

ಕೊರಿಯಾ.

ಕೊರಿಯಾ ಯುದ್ಧ ರಂಗದಲ್ಲಿ ಇಬ್ಬಾಗಗಳ ಕಾದಾಟವೂ ಅವಿರಾಮವಾಗಿ ಮುಂದರಿಯುತ್ತಿದೆ. ಇದರ ನಡುವೆ ಪಶ್ಚಿಮ ಸೇನಾಧಿಪತಿ ಜನರಲ್ ಮಾರ್ಕ ಕ್ಲಾರ್ಕರ ಆಹ್ವಾನವನ್ನು ಅಂಗೀಕರಿಸಿ, ಬ್ರಿಟನಿನ ಸಂರಕ್ಷಣಾ ಮಂತ್ರಿ ಲಾರ್ಡ್ ಅಲೆಕ್ಜಾಂಡರ್ ಕದನ ರಂಗಕ್ಕೆ ಭೇಟಿ ಕೊಟ್ಟರು. ಸಾಮಾನ್ಯವಾಗಿ ಕೊರಿಯಾದಲ್ಲಿ ನಡೆಯುತ್ತಿರುವ ಘಟನೆಗಳು ಬ್ರಿಟನಿನ ಮನಸ್ಸಿಗೆ ಅಸಮಾಧಾನವನ್ನುಂಟು ಮಾಡಿವೆ–ಈಚೆಗೆ ಕೈದಿಗಳ ಬಂಡಾಯದ ಸುದ್ದಿಯಿಂದ ಅದು ಮತ್ತಷ್ಟು ವ್ಯಾಕುಲಗೊಂಡಿದೆ. ಕಾರಣ ಪರಿಸ್ಥಿತಿಯ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಳ್ಳಲಿಕ್ಕಾಗಿ ತನ್ನ ರಕ್ಷಣಾ ಸಚಿವರನ್ನೆ ಕಳಿಸಿಕೊಡಲು ಅದಕ್ಕೆ ಮನಬಂದಾಯಿತು. ಕೊರಿಯದ ಯುದ್ಧವನ್ನು ಹೆಚ್ಚಿಸುವುದು ಬೇಕಾಗಿಲ್ಲ–ಆದರೆ ಮಂಚೂರಿಯಾದಲ್ಲಿ ಚೀನೀಯರು ಅಹಳ ಸೈನ್ಯ ಸಂಗ್ರಹವನ್ನು ಮಾಡಿಟ್ಟಿರುವರು. ಅದಲ್ಲದೆ ಎಲ್ಲಿಯಾದರೂ ಅಣುಬಾಂಬಿನ ಧಾಳಿಯಾಗುವುದಿದ್ದರೆ, ಅದರಿಂದ ಸಂರಕ್ಷಣೆ ಪಡೆಯುವ ಉದ್ದೇಶದಿಂದ ಈಗಲೇ ಆಳವಾದ ದೊಡ್ಡ ದೊಡ್ಡ ಕಂದಕಗಳನ್ನು ತೋಡುತ್ತಿರುವರು. ಅವರ ಜನಬಲವು ಅಪಾರವಾಗಿದೆ–ಹಾಗೆಂದೇ ಕೊರಿಯಾದ ಈ ಕ್ಷಣದಲ್ಲಿ ಯೋಜಿಯ ಆದರೂ ಸಂಪಾದನೆ ಸಂಯುಕ್ತ ರಾಷ್ಟ್ರ ಸಂಘಕ್ಕೇ ನೇಸೇರಿದೆ ಎಂಬಲ್ಲಿ ಸಂದೇಹ ಬೇಡ–ಎಂದು ಬ್ರಿಟಿಷ್ ಸಂರಕ್ಷಣಾ ಮಂತ್ರಿಗಳ ಹೇಳಿಕೆ.

ಅರಸೊತ್ತಿಗೆ ಇನ್ನಿಲ್ಲ.

ಕಾಶ್ಮೀರದ ನಿರ್ಣಯ.

ಮೂಲ ತತ್ವಗಳನ್ನು ನಿರ್ದೇಶಿಸುವ ಉದ್ದೇಶದಿಂದ ಮುಖ್ಯ ಮಂತ್ರಿ ಶೇಖ ಅಬ್ದುಲ್ಲಾರ ಅಧ್ಯಕ್ಷತೆಯಲ್ಲಿ ಕಾಶ್ಮೀರವು ನೇಮಿಸಿದ್ದ ಸಮಿತಿಯೊಂದು ರಾಜ್ಯದ ವರಿಷ್ಠ ಸ್ಥರಾಗಿ ಚುನಾಯಿತ ವ್ಯಕ್ತಿ ಇರಬೇಕೆಂದು ಸೂಚಿಸಿದೆ. ಈಗಿರುವ ವಂಶಪರಂಪರಾಗತವಾದ ಅರಸೊತ್ತಿಗೆಯನ್ನು ನಿರ್ಮೂಲಿಸಬೇಕೆಂದು ಅದು ಶಿಫಾರಸು ಮಾಡಿದೆ. ಇದನ್ನು ಪರ್ಯಾಲೋಚಿಸಿ ಕಾಶ್ಮೀರ ಘಟನಾ ಸಮಿತಿಯು ತನ್ನ ಒಮ್ಮತದ ಒಪ್ಪಿಗೆಯನ್ನೂ ನೀಡಿದೆ. ಹೀಗಾಗಿ–ಇನ್ನು ಮುಂದೆ ಕಾಶ್ಮೀರದಲ್ಲಿ ಅರಸು ಮನೆತನವು ಪರಂಪರಾಗತವಾದ ಅಧಿಕಾರದ ಬಲದಿಂದ ರಾಜ್ಯದ ವರಿಷ್ಠ ಪದವಿಯನ್ನು ಅಲಂಕರಿಸಲು ಬಾರದು. ಜನರು ಚುನಾವಣೆಯ ಮೂಲಕ ರಾಜ ಪ್ರಮುಖನನ್ನು ಆರಿಸಬೇಕಾಗುವುದು. ಭಾರತದ ರಾಜ್ಯಘಟನೆಯಂತೆ ಯಾವದೇ ಸಂಸ್ಥಾನದಲ್ಲಿ ಜನರಿಂದ ಚುನಾಯಿತನಾದ ರಾಜಪ್ರಮುಖನಿರಲಾರನು– ದಾಷ್ಟ್ರಧ್ಯಕ್ಷರೇ ಅವನನ್ನು ನೇಮಿಸುವರು ಹೊರತು, ಜನರು ಈ ವಿಷಯದಲ್ಲಿ ನೈಹಾಕಲಾರರು. ಕಾಶ್ಮೀರವು ಭಾರತದೊಡನೆ ಇಟ್ಟುಕೊಂಡಿರುವ ಪ್ರಕೃತ ಸಂಬಂಧವು ಈಗಿನ ನಿರ್ಣಯದ ಪರಿಣಾಮವಾಗಿ ಕೆಡಬಹುದೆಂಬ ಸಂಶಯವೆದ್ದಿದೆ. ಆದರೆ ಮೊನ್ನೆ ಪ್ರಧಾನಿ ನೆಹರೂ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದೊಡನೆ ಮಾತನಾಡುವಾಗ ಇದು ತೊಂದರೆಕೊಡುವ ನಿರ್ಣಯವಲ್ಲವೆಂದು ಅಭಿಪ್ರಾಯಪಟ್ಟರು. ಭಾರತದೊಡನೆ ವಿದೇಶ ವ್ಯವಹಾರ, ಸಂರಕ್ಷಣೆ ಮತ್ತು ಸಾರಿಗೆ ಸೌಕರ್ಯದ ವಿಷಯಗಳಲ್ಲಿ ಮಾತ್ರ ಕಾಶ್ಮೀರ ಸೇರ್ಪಡೆಹೊಂದಿದ. ಉಳಿದ ವಿಷಯಗಳಲ್ಲಿ ಅದಕ್ಕೆ ಸ್ವಾಯತ್ತಾಧಿಕಾರವಿದೆ ಕಾಶ್ಮೀರ ಘಟನಾ ಸಮಿತಿಯು ರಾಜ್ಯಕ್ಕೊಂದು ಘಟನೆ ನಿರ್ಮಿಸಬೇಕೆಂಬ ತತ್ವವನ್ನು ಭಾರತವು ಮನ್ನಿಸಿದೆ. ಆದುದರಿಂದ ಅರಸೊತ್ತಿಗೆಯನ್ನು ನಿರ್ಮೂಲಿಸುವ ನಿರ್ಣಯದಿಂದ ವಿಮುಖನೆಗೊಳ್ಳಬೇಕಿಲ್ಲ ಎಂದು ನೆಹರೂರ ಹೇಳಿಕೆ. ಹೀಗಿದ್ದರೂ ಕಾಶ್ಮೀರವು ಭಾರತದ ರಾಜ್ಯಘಟನೆಯ ಇತಿಮಿತಿಯನ್ನು ಮನ್ನಿಸಿ, ಅದನ್ನು ಅನುಸರಿಸಿ ನಡೆಯಲು ನೋಡುತ್ತಿಲ್ಲ ಎಂಬುದಕ್ಕೆ ಇನ್ನೂ ಕೆಲವು ಉದಾಹರಣೆಗಳಿವೆ–ರಾಜ್ಯದಲ್ಲಿ ಭೂ ಸುಧಾರಣೆ ಮಾಡುವಾಗ ಭೂ ಮಾಲಿಕರಿಗೆ ಏನೊಂದೂ ಪರಿಹಾರ ಕೊಡಲಿಲ್ಲ. ಮಾನ್ಸೆ ಮೊನ್ಸೆ ಕಾಶ್ಮೀರಕ್ಕೊಂದು ರಾಷ್ಟ್ರೀಯ ಧ್ವಜವಿರಬೇಕೆಂದು ನಿರ್ಣಯಿಸಿ, ಅದರ ಸ್ವರೂಪವನ್ನೂ ನಿರ್ಧರಿಸಿದೆ. ಈಚೆಗೆ ಶೇಖ್ ಅಬ್ದುಲ್ಲಾರು ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣ ಇತ್ಯಾದಿಗಳು ಕಾಶ್ಮೀರ ಪ್ರಕರಣದಲ್ಲಿ ಭಾರತದ ಸ್ಥಾನ ಮೇನೇಬಾದನ್ನೇ ಪ್ರತಿಪಾದಿಸುವಂತಿವೆ.

ನವಯುಗ್

ಎಲಿಜಬೆತ್ ರಾಣಿಯ ಪಟ್ಟಾಭಿಷೇಕ

ಬ್ರಿಟಿಷ್ ರಾಣಿ ಎಲಿಜಬೆತಳ ಪಟ್ಟಾಭಿಷೇಕವನ್ನು ೧೯೫೩ನೇ ಜೂನ್ ೨ರಂದು ಜರುಗಿಸುವುದೆಂದು ನಿರ್ಣಯವಾಗಿದೆ. ಈ ಪಟ್ಟಾಭಿಷೇಕವನ್ನು ಅತ್ಯಂತ ಸಂಭ್ರಮದಲ್ಲಿ ಜರುಗಿಸುವರೆ ಖರ್ಚಿನ ಮಟ್ಟಿಗೆ ಯಾವುದೊಂದು ರೀತಿಯಲ್ಲಿ ಕೈ ಹಿಂದೆ ಸೆಳೆಯಬಾರದಾಗಿ ಬ್ರಿಟಿಷ್ ಪ್ರಧಾನ ಮಂತ್ರಿ ವಿ॥ ವಿನ್ಸ್‌ಟನ್ ಚರ್ಚಿಲ್ಲರ ಅಜ್ಞೆಯಾಗಿದೆ. ಈ ಮೊದಲು ಬ್ರಿಟಿಷ್ ಸಾರ್ವಭೌಮರ ಪಟ್ಟಾಭಿಷೇಕದ ಕುರಿತು ವ್ಯವಸ್ಥೆಯನ್ನು ಆರಸು ಮನೆತನದ ಸದಸ್ಯರೊಬ್ಬರು ಚೆಯರ್ಮೆನರಾಗಿದ್ದು ಪ್ರೀವಿ ಕೌನ್ಸಿಲೇ ನಡೆಸುವುದಿತ್ತು. ಆದರೆ ಈ ಬಾರಿ ಪ್ರತ್ಯೇಕವಾಗಿ ಪಟ್ಟಾಭಿಷೇಕ ಸಮಿತಿಯೊಂದು ರಚನೆಯಾಗಿದೆ. ಈ ಸಮಿತಿಯಲ್ಲಿ ಮಂತ್ರಿಮಂಡಳದ ಸದಸ್ಯರು, ಮೂರು ಸರ್ವೀಸ್‌ಗಳು ಮತ್ತು ಕೆಲ ಮಂದಿ ಹಿರಿಯ ಸರಕಾರಿ ಅಧಿಕಾರಿಗಳಿರುವರು. ಬ್ರಿಟನಿನ ಫೆಸ್ಟಿವಲ್ ಉತ್ಸವಕ್ಕೆ ಸೋಶಲಿಷ್ಟ ಸರಕಾರವು ವಿಪುಲ ಹಣವನ್ನು ವ್ಯಯಿಸಿದ ಹಾಗೆ ಈ ಬಾರಿಯ ಕನ್ಸರ್ವೇಟಿವ್ ಸರಕಾರವು ಬ್ರಿಟಿಷ ರಾಣಿಯ ಪಟ್ಟಾಭಿಷೇಕಕ್ಕೆ ಹಣ ವ್ಯಯಿಸುವ ಮಟ್ಟಿಗೆ ಹಿಂದೆ ಸರಿಯಬಾರದೆಂಬ ಅಭಿಮತವು ವಿ. ಚರ್ಚಿಲ್ಲರದು.

ಉತ್ತರ ಪ್ರದೇಶದಲ್ಲಿ ಕತ್ತೆಗಳ ಹೆಚ್ಚಳ.

ಭಾರತದಲ್ಲಿ ಕತ್ತೆಗಳ ಸಂಖ್ಯೆಯು ಮುಟ್ಟಿಗೆ ಪ್ರಥಮ ಸ್ಥಾನ ಉತ್ತರ ಪ್ರದೇಶಕ್ಕೆ ದೊರೆಯುತ್ತದೆ. ಅಲ್ಲಿರುವ ಕತ್ತೆಗಳ ಸಂಖ್ಯೆ ೩,೨೪,೦೦೦. ಎರಡನೆಯ ಸ್ಥಾನ ರಾಜಸ್ಥಾನಕ್ಕೆ ಸಲ್ಲುವುದು. ಅಲ್ಲಿ ೨,೦೯,೦೦೦ ಕತ್ತೆಗಳಿವೆ. ಇನ್ನು ಗೋವಗಳ ಮಟ್ಟಿಗೂ ಉತ್ತರ ಪ್ರದೇಶವೇ ನೊದಲ ಸ್ಥಾನದಲ್ಲಿದೆ. ಅಲ್ಲಿಯ ಗೋಸಂಪತ್ತು ೩,೧೭,೦೦,೦೦೦. ಇನ್ನು ಹಂದಿಗಳ ಸಂಖ್ಯೆ ೧೦,೦೦;೦೦೦. ಬೀಜದ ಹೋರಿಗಳ ಮಟ್ಟಿಗೆ ಮದ್ರಾಸು ಪ್ರಾಂತವು ಭಾರತದಲ್ಲಿ ಪ್ರಥಮ ಸ್ಥಾನ ಹೊಂದುತ್ತದೆ. ಇಲ್ಲಿ ೯೩,೨೭೮ ಬೀಜದ ಹೋರಿಗಳವೆ ಮಹಾರಾಷ್ಟ್ರ ಪ್ರಾಂತದಲ್ಲಿ ೭೨,೯೦೨ ಇವೆ. ಆಡುಗಳ ಸಂಖ್ಯೆಯಲ್ಲಿ ರಾಜಸ್ಥಾನವು ಅಗ್ರಸ್ಥಾನ ಪಡೆಯುತ್ತದೆ. ಅಲ್ಲಿ ೭೨,೫೦,೦೦೦ ಆಡುಗಳಿವೆ. ಮದ್ರಾಸಿನಲ್ಲಿ ೬೨,೦೦೦೦ ಆಡುಗಳವೆ. ಒಂಟೆಗಳ ಮಟ್ಟಿಗೂ ನೊದಲ ಸ್ಥಾನ ರಾಜಸ್ಥಾನಕ್ಕೆ ೩,೮೧,೦೦೦ ಒಂಟೆಗಳು ಇರೇ ೯ ಒಂಟೆಗಳಿರುವ ಒಡಿಸಕ್ಕೆ ಎರಡನೇ ಸ್ಥಾನಕ್ಕೆ ಸಲ್ಲುವುದು.

ಕುಶಲ ಕುಮೂರಿಯರು.

ಕಾನಪುರದಲ್ಲಿ ನಡೆದ ಮೆಟ್ರಿಕ್ ಹಾಗೂ ಇಂಟರ್ ಪರೀಕ್ಷೆಗಳಲ್ಲಿ ಕಾಪಿ ಮಾಡುವ ನವ ವಿಧಾನಗಳು ಹೊರಬಿದಿದೆ. ಅದರಲ್ಲಿಯೂ ಯುಕ್ತಿ ಕುಶಲಕಾದ ಕಮೂರಿಯರು ಕೈಕೊಂಡ ವಿಧಾನಗಳನ್ನು ಗಮನಿಸಿದಾಗ ಆಶ್ಚರ್ಯಾಗಧಿರದು.

ಕೆಲವು ಕಮೂರಿಯರು ತಮಗೆ ಬೇಕಾದ ಉತ್ತರಗಳನ್ನು ತಮ್ಮ ಸೀರೆಯ ದಡಿಗೆಯಲ್ಲಿ ಬರೆದುಕೊಂಡು ಬಂದು ಸಮಯ ಸಾಧಿಸಿ ನೋಡಿ ನೋಡಿ ಉತ್ತರ ಬರೆಯುತ್ತಿದ್ದುದು ಕೊನೆಗೊಮ್ಮೆ ಹೊರಬಿದ್ದಿತು. ದಡಿಯಲ್ಲಿಯ ಉತ್ತರಗಳನ್ನು ನೋಡುಗರಿಗೆ ಸೀರೆಯಲ್ಲಿ ಒಂದು ತೆರದ ಡಿಜಾಯಿನಿನಂತೆ ಕಾಣುತ್ತಿದ್ದವು.

ಇನ್ನೂ ಕೆಲವು ಕುಮೂರಿಯರು ತಮ್ಮ ಲಂಗದ ಮೇಲೆ ಉತ್ತರಗಳನ್ನು ಬರೆದು ಅದರ ಮೇಲೆ ಪಾರದರ್ಶಕ ಸೀರೆಯನ್ನುಟ್ಟುಕೊಂಡು ಬಂದು ಪರೀಕ್ಷೆಯ ಕಾಲಕ್ಕೆ ಸೂಕ್ಷ್ಮವಾಗಿ ಉತ್ತರ ಬರೆಯುತಿದ್ದುದು ಬಹು ವೇಳೆಯ ನಂತರ ಗೋಚರವಾಯಿತು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಖಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿಟ್ಸ್, ವಾರ್ಡಸ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.